
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಮಹಿಳಾ ಕ್ರಿಕೆಟ್ ತಂಡದ ತಾರಾ ಆಟಗಾರ್ತಿ ಸ್ಮೃತಿ ಮಂದಾನ ಜೊತೆ ಮದುವೆ ಮುಂದೂಡಲ್ಪಟ್ಟ ನಂತರ ಗಾಯಕಸಂಗೀತ ನಿರ್ದೇಶಕ ಪಲಾಶ್ ಮುಚ್ಚಲ್ ಅವರು ಸೋಮವಾರ ಮೊದಲ ಬಾರಿಗೆ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ.

02 ಡಿಸೆಂಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 260 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಕನ್ನಡಿಗರು ವೃತ್ತಿಪರತೆಯನ್ನು ಬೆಳೆಸಿಕೊಳ್ಳಬೇಕಿದೆ... » 2


ಹೆಚ್ಐವಿ ಪೀಡಿತರಿಗೆ ಧೈರ್ಯ ತುಂಬುವುದು ಅತ್ಯಗತ್ಯ » 3


ಕಾಮಗಾರಿಗೆ ಶಾಸಕರು ಮನೆಯಿಂದ ಅನುದಾನ ತಅಂದಿಲ್ಲ » 4

# ಮೊದಲ ದಿನವೇ ಅಧಿವೇಶನ ಮುಂದೂಡಿಕೆ

## ಎಸ್ಐಆರ್ ವಿಚಾರ ಮುಂದಿಟ್ಟುಕೊಂಡು ಪ್ರತಿಪಕ್ಷಗಳ ಗದ್ದಲ | ಸದನದ ಬಾವಿಗಿಳಿದು ಪ್ರತಿಭಟನೆ

• ಪ್ರಜೋದಯ ವರದಿ

**ನವದೆಹಲಿ:** ಸಂಸತ್ತಿನ ಚಳಿಗಾಲದ ಅಧಿವೇಶನದ ಮೊದಲ ದಿನವಾದ ಸೋಮವಾರ ಮತದಾರರ ಪಟ್ಟಿಯ ವಿವಾದಾತ್ಮಕ ವಿಶೇಷ ಸಮಗ್ರ ಪರಿಷ್ಕರಣೆ(ಎಸ್ಐಆರ್) ಕುರಿತು ಚರ್ಚೆಗೆ ಒತ್ತಾಯಿಸಿ ವಿರೋಧ ಪಕ್ಷಗಳು ನಿರಂತರವಾಗಿ ಪ್ರತಿಭಟನೆ ನಡೆಸಿದ ಕಾರಣ ಲೋಕಸಭಾ ಕಲಾಪವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

ಕಲಾಪ ಆರಂಭವಾಗುತ್ತಿದ್ದಂತೆ ಎಸ್ಐಆರ್ ವಿಚಾರ ಮುಂದಿಟ್ಟುಕೊಂಡು ಪ್ರತಿಪಕ್ಷಗಳು ಗದ್ದಲ ಉಂಟು ಮಾಡಿದ್ದರಿಂದ ಕಲಾಪವನ್ನು ಮೊದಲಿಗೆ ಮಧ್ಯಾಹ್ನ 12 ಗಂಟೆಯವರೆಗೂ ಮುಂದೂಡಲಾಗಿತ್ತು. ತದನಂತರ ಕಲಾಪ ಸಮಾವೇಶ ಗೊಂಡರೂ ಹಲವು ವಿರೋಧ ಪಕ್ಷಗಳ ಸದಸ್ಯರು ಎಸ್ಐಆರ್ ವಿಷಯದ ಬಗ್ಗೆ ಚರ್ಚೆಗೆ ಒತ್ತಾಯಿಸಿ ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿದರು.



ಇದರಿಂದಾಗಿ ಕಲಾಪವನ್ನು ಮಧ್ಯಾಹ್ನ 2 ಗಂಟೆಯವರೆಗೂ ಮುಂದೂಡಲಾಯಿತು. ಬಳಿಕವೂ ಪ್ರತಿಪಕ್ಷದ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದರಿಂದ ಮೊಲದ ದಿನದ ಕಲಾಪವನ್ನು ಮುಂದೂಡಲಾಯಿತು.

ಗದ್ದಲದ ನಡುವೆಯೇ, ಮಣಿಪುರದಲ್ಲಿ ಜಿಎಸ್ಟಿ ಕಾನೂನಿಗೆ ತಿದ್ದುಪಡಿ ಜಾರಿಗೆ ತರುವ ಮಸೂದೆಯನ್ನು ಸಂಕ್ಷಿಪ್ತ ಚರ್ಚೆಯ ನಂತರ ಅಂಗೀಕರಿಸಲಾಯಿತು. ಈ ವಿಷಯದ ಕುರಿತು ಸುಗ್ರೀವಾಜ್ಞೆಯನ್ನು ಬದಲಾಯಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಮಸೂದೆಯನ್ನು ಮಂಡಿಸಿ, ಮಣಿಪುರ ರಾಜ್ಯವು ರಾಷ್ಟ್ರಪತಿ ಆಳ್ವಿಕೆಯಲ್ಲಿದೆ, ಸಂಸತ್ ಈ ಮಸೂದೆಯನ್ನು ಅಂಗೀಕರಿಸಲು ತನ್ನ ಅಧಿಕಾರವನ್ನು ಬಳಸುತ್ತಿದೆ ಎಂದು ಹೇಳಿದರು.

ಶೂನ್ಯ ವೇಳೆಯ 12 ನಿಮಿಷಗಳ ಅವಧಿಯಲ್ಲಿ, ಸೀತಾರಾಮನ್ 2025-2026 ರ ಅನುದಾನಕ್ಕಾಗಿ ಪೂರಕ ಬೇಡಿಕೆಗಳನ್ನು ಮಂಡಿಸುವುದರ ಜೊತೆಗೆ ಮೂರು ಮಸೂದೆಗಳನ್ನು ಮಂಡಿಸಿದರು. ತಂಬಾಕು ಮತ್ತು ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕವನ್ನು ವಿಧಿಸುವ ಎರಡು ಮಸೂದೆಗಳು ಮತ್ತು ಪಾನ್ ಮಸಾಲಾ ತಯಾರಿಕೆಯ ಮೇಲೆ ಹೊಸ ಸೆಸ್ ಅನ್ನು ಪರಿಚಯಿಸಲಾಯಿತು.

### ಸೋಲಿನ ಭೀತಿ ಚರ್ಚೆಗೆ ಕಾರಣವಾಗದಿರಲಿ: ಮೋದಿ

ಸಂಸತ್ ಚಳಿಗಾಲದ ಅಧಿವೇಶನದಲ್ಲಿ ಸೋಲಿನ ಭೀತಿ ಪ್ರತಿಪಕ್ಷಗಳ ಚರ್ಚೆಗೆ ಕಾರಣವಾಗಬಾರದೆಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಸಂಸತ್ ಭವನದ ಮುಂದೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ ಪ್ರಜಾಪ್ರಭುತ್ವದಲ್ಲಿ ಬದುಕಿದ್ದು, ಪ್ರಜಾಪ್ರಭುತ್ವದ ಉತ್ಸಾಹ ಪದೇ ಪದೇ ವ್ಯಕ್ತವಾಗುತ್ತಿರುವುದರಿಂದ ಪ್ರಜಾಪ್ರಭುತ್ವದ ಮೇಲಿನ ನಂಬಿಕೆ ಬಲವಾಗಿ ಬೆಳೆಯುತ್ತಲೇ ಇದೆ ಎಂದರು.

ಜನರ ಪ್ರತಿನಿಧಿಗಳಾಗಿ, ಭವಿಷ್ಯದ ಬಗ್ಗೆ ಯೋಚಿಸುವಾಗ ನಾವು ದೇಶದ ಜನರ ಜವಾಬ್ದಾರಿ ಮತ್ತು ನಿರೀಕ್ಷೆಗಳನ್ನು ಅತ್ಯಂತ ಸಮತೋಲನ ಮತ್ತು ಜವಾಬ್ದಾರಿಯಿಂದ ನಿರ್ವಹಿಸಬೇಕು. ಈ ಸಂಸತ್ತು ದೇಶದ ಬಗ್ಗೆ ಏನು ಯೋಚಿಸುತ್ತದೆ ದೇಶಕ್ಕಾಗಿ ಏನು ಮಾಡಲು ಬಯಸುತ್ತದೆ ಎಂಬುದರ ಮೇಲೆ ಅಧಿವೇಶನ ಗಮನ ಕೇಂದ್ರೀಕರಿಸಬೇಕು. ವಿರೋಧ ಪಕ್ಷಗಳು ಸಹ ತನ್ನ ಜವಾಬ್ದಾರಿ ಅರಿತು ಕಾರ್ಯ ನಿರ್ವಹಿಸಬೇಕು. ಅವರ ಸೋಲಿನ ನಿರಾಶೆಯನ್ನು ಮರೆತುಬಿಡಬೇಕೆಂದರು.

### ಮೋದಿಯಿಂದ ಡ್ರಾಮಾಬಾಜಿ: ಖರ್ಗೆ

ಸಂಸತ್ತಿನಲ್ಲಿ ನಿಜವಾದ ಸಮಸ್ಯೆಗಳನ್ನು ಪರಿಹರಿಸುವ ಬದಲು, ಪ್ರಧಾನಿ ಮೋದಿ ಮತ್ತೊಮ್ಮೆ ತಮ್ಮ ಡ್ರಾಮಾಬಾಜಿ ತೋರಿಸಿದ್ದಾರೆಂದು ಮಲ್ಲಿಕಾರ್ಜುನ ಖರ್ಗೆ ಅವರು ಟೀಕಿಸಿದ್ದಾರೆ.

ಮಣಿಪುರ ಪರಿಸ್ಥಿತಿಯಂತಹ ನಿರ್ಣಾಯಕ ಸಮಸ್ಯೆಗಳನ್ನು ಸರ್ಕಾರ ನಿರ್ವಹಿಸುವ ರೀತಿಯನ್ನು ಖಂಡಿಸಿ, ಮತಗಳ್ಳತನ ಆರೋಪಗಳು ಸೇರಿ ಪ್ರಮುಖ ಕಾಳಜಿಗಳನ್ನು ಎತ್ತಲು ವಿರೋಧ ಪಕ್ಷವು ಬದ್ಧವಾಗಿದೆ ಮತ್ತು ಸಂಸತ್ತಿನಲ್ಲಿ ಎತ್ತಿ ತೋರಿಸುವುದನ್ನು ಮುಂದುವರಿಸುತ್ತದೆ. ಜನರನ್ನು ಕಾಡುತ್ತಿರುವ ನೈಜ ಸಮಸ್ಯೆಗಳ ಕುರಿತು ಚರ್ಚೆಯಲ್ಲಿ ತೊಡಗಬೇಕು.

# ಕೋಡಿ ಶ್ರೀಗಳ ಆಶೀರ್ವಾದ ಪಡೆದ ಸಚಿವ ಜಿ. ಪರಮೇಶ್ವರ್

• ಪ್ರಜೋದಯ ವರದಿ

**ಅರಸೀಕೆರೆ:** ತಾಲ್ಲೂಕಿನ ಹಾರನಹಳ್ಳಿ ಕೋಡಿಮಠಕ್ಕೆ ಸೋಮವಾರ ಬೆಳಿಗ್ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಭೇಟಿ ನೀಡಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಡಾ.ಶ್ರೀ ಶಿವಾನಂದ ಶಿವಯೋಗಿ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಒಂದು ಗಂಟೆಗೂ ಹೆಚ್ಚು ಕಾಲ ಶ್ರೀಗಳೊಂದಿಗೆ ಗೌಪ್ಯ ಮಾತುಕತೆ ನಡೆಸಿದ ಸಚಿವ ಪರಮೇಶ್ವರ್ ಅವರ ನಡೆ ರಾಜಕೀಯ ವಲಯದಲ್ಲಿ ನಾನಾ ಚರ್ಚೆಗೆ ಗ್ರಾಸವಾಗಿದೆ. ರಾಜ್ಯ ರಾಜಕೀಯದಲ್ಲಿ ನಾಯಕತ್ವ ಬದಲಾವಣೆ ಹಾಗು ಸಂಪುಟ ಪುನರ್ ರಚನೆ ವಿಚಾರ ತಾರಕಕ್ಕೇರಿರುವ ನಡುವೆ ಜಿ. ಪರಮೇಶ್ವರ್ ಅವರ ಟೆಂಪಲ್ ರನ್ ಗಮನ ಸೆಳೆದಿದೆ.

**ರಹಸ್ಯ ಭೇಟಿಯ ಕೌತುಕ**

ಸಾಮಾನ್ಯವಾಗಿ ಸಚಿವರು ಜಿಲ್ಲೆಗೆ ಭೇಟಿ ನೀಡುವಾಗ ಪೊಲೀಸ್ ಇಲಾಖೆ, ಪಕ್ಷದ ಮುಖಂಡರಿಗೆ ಮಾಹಿತಿ ಇರುತ್ತದೆ. ಅದರಲ್ಲೂ ತಮ್ಮದೇ ಪಕ್ಷದ ಶಾಸಕರು, ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆಗಿರುವ ಕೆ. ಎಂ.ಶಿವಲಿಂಗೇಗೌಡ ಅವರಿಗೂ



ಸಚಿವರ ಭೇಟಿ ವಿಚಾರ ತಿಳಿದಿಲ್ಲ. ಬೆಂಗಾವಲು ವಾಹನ ಇಲ್ಲದೆ ಕಾರಿನಲ್ಲಿ ಬಂದಿದ್ದ ಸಚಿವರು ಸ್ವಾಮೀಜಿ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿದ್ದಾರೆ. ಕೋಡಿ ಶ್ರೀಗಳು ಪ್ರಳಯ, ಮಳೆ, ರಾಜಕೀಯ ವಿದ್ಯಮಾನಗಳ ಬಗ್ಗೆ ತಾಳೆಗರಿ ಭವಿಷ್ಯ ನುಡಿಯುತ್ತಾರೆ. ಹೀಗಾಗಿ ಮುಂದಿನ ರಾಜಕೀಯ ಭವಿಷ್ಯದ ಕುರಿತು ಪರಮೇಶ್ವರ್ ಅವರು ಚರ್ಚೆ ನಡೆಸಿರಬಹುದು ಎನ್ನಲಾಗಿದೆ.

**ಏನೂ ಚರ್ಚೆ ನಡೆದಿಲ್ಲ**


ಈ ಕುರಿತು ಪ್ರತಿಕ್ರಿಯಿಸಿದ ಸ್ವಾಮೀಜಿ ಅವರು, ಜಿ.ಪರಮೇಶ್ವರ್ ಅವರು ಶ್ರೀ ಮಠದ ಭಕ್ತರು. ಆಗಾಗ ಮಠಕ್ಕೆ ಭೇಟಿ ನೀಡುತ್ತಾರೆ. ಶಿವಲಿಂಗಜ್ಜಯ್ಯ ಮತ್ತು ನೀಲಮ್ಮಜ್ಜಯ್ಯ ಗದ್ದುಗೆ ದರ್ಶನ ಮಾಡಿ ಪೂಜೆ ಸಲ್ಲಿಸಿದರು. ಇಷ್ಟು ಹೊರತುಪಡಿಸಿ ಬೇರೆ ಯಾವ ಚರ್ಚೆ ನಡೆದಿಲ್ಲ. ಸಂಕ್ರಾಂತಿ ಬಳಿಕವಷ್ಟೇ ಭವಿಷ್ಯ ಹೇಳುತ್ತೇನೆಂದು ಸ್ಪಷ್ಟನೆ ನೀಡಿದರು.

# ನಾಳೆಯಿಂದ ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟ

• ಪ್ರಜೋದಯ ವರದಿ

**ಹಾಸನ:** ರಾಜ್ಯಮಟ್ಟದ ಆದಿಚುಂಚನಗಿರಿ ಕ್ರೀಡಾಕೂಟವನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಡಿ.3 ರಿಂದ 5 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಶಂಭುನಾಥ ಸ್ವಾಮೀಜಿ ಅವರು ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.3 ರಂದು ಸಂಜೆ ಕ್ರೀಡಾಜ್ಯೋತಿ ನಗರಕ್ಕೆ ಆಗಮಿಸಲಿದೆ. ಡಿ.4 ರಂದು ಬೆಳಿಗ್ಗೆ 9 ಗಂಟೆಗೆ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ಕ್ರೀಡಾಪಟುಗಳು ಕ್ರೀಡಾಜ್ಯೋತಿಯೊಂದಿಗೆ ನಗರದ ಕಲಾಭವನದಿಂದ ಸಾಲಗಾಮೆ ರಸ್ತೆ ಮೂಲಕ ಜಿಲ್ಲಾ ಕ್ರೀಡಾಂಗಣದವರೆಗೆ ಸಾಗಲಿದೆ. ಸಂಜೆ 6 ಗಂಟೆಗೆ ನಗರದ ಆದಿಚುಂಚನಗಿರಿ ಆಂಗ್ಲಮಾಧ್ಯಮ ಶಾಲೆ ಆವರಣದಲ್ಲಿ ಬಿಜಿಎಸ್ ಸಂಭ್ರಮ ನಡೆಯಲಿದೆ. ಡಿ.5 ರಂದು ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಕ್ರೀಡಾಕೂಟಕ್ಕೆ ಅನೇಕರು ಸಹಕಾರ



ನೀಡಿದ್ದು, ಅಂದು ಸ್ಮರಣ ಸಂಚಿಕೆ ಬಿಡುಗಡೆ ಆಗಲಿದೆ ಎಂದರು.

ಆದಿಚುಂಚನಗಿರಿ ಹಾಸನ-ಕೊಡಗು ಮಠಗಳ ಆಶ್ರಯದಲ್ಲಿ ಕ್ರೀಡಾಕೂಟವನ್ನು ಹಮ್ಮಿಕೊಳ್ಳಲಾಗಿದೆ. ಒಟ್ಟು 10 ಸಾವಿರ ಮಂದಿ ಭಾಗಿಯಾಗುವ ನಿರೀಕ್ಷೆ ಇದ್ದು, ಈ ಪೈಕಿ 5 ಸಾವಿರ ಮಂದಿ ಕ್ರೀಡಾ ಪಟುಗಳೇ ಇರಲಿದ್ದಾರೆ. ಮಕ್ಕಳು ಉಳಿದುಕೊಳ್ಳಲು 28 ಕಲ್ಯಾಣ ಮಂಟಪಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ಕ್ರೀಡಾಕೂಟಕ್ಕಾಗಿ ಎಲ್ಲಾ ರೀತಿಯ ಸಿದ್ಧತೆಯಾಗಿದೆ. ಈ ಹಿಂದೆ ರಾಜ್ಯಮಟ್ಟದ 13ನೇ ಕ್ರೀಡಾಕೂಟ ಹಾಸನದಲ್ಲೇ ನಡೆದಿತ್ತು. ಇದೀಗ 28ನೇ ಕ್ರೀಡಾಕೂಟದ ಆತಿಥ್ಯ ಸಿಕ್ಕಿದೆ. ಪ್ರಾಥಮಿಕ, ಪ್ರೌಢ ಮತ್ತು ಕಾಲೇಜು ಮೂರು ವಿಭಾಗಗಳಲ್ಲಿ 14, 17 ಮತ್ತು 19 ವರ್ಷ ಬಾಲಕ- ಬಾಲಕಿಯರು ಭಾಗಿಯಾಗಲಿದ್ದಾರೆ. ಕ್ರೀಡಾಕೂಟದ ಅತಿಥಿಗಳಾಗಿ ವೇಗದ ಓಟಗಾರ್ತಿ, ರಾಷ್ಟ್ರೀಯ ಅಥ್ಲೆಟ್ ಪೂನಂ ಬೆಳ್ಳಿಯಪ್ಪ, ಹೈ ಜಂಪ್ ಸಾಧಕ ಹರ್ಷಿತ್, ಬಿಜಿಎಸ್ ಸಂಸ್ಥೆಯ ವಿದ್ಯಾರ್ಥಿನಿ, ವೇಗದ ಓಟದಲ್ಲಿ ಭಾರತ ಪ್ರತಿನಿಧಿಸಿರುವ ಇಂಚರಾ ಮೊದಲಾದವರು ಭಾಗಿಯಾಗಲಿದ್ದಾರೆ ಎಂದರು.

ನಮ್ಮ ಸಂಸ್ಥೆಯ ಮಕ್ಕಳು ಈಗಾಗಲೇ ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಆ ಸಂಖ್ಯೆ ಮತ್ತಷ್ಟು ಹೆಚ್ಚಾಗಬೇಕೆಂಬ ಉದ್ದೇಶದಿಂದ ಈ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು. ಬಿಜಿಎಸ್ ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಡಾ.ಎ.ಸಿ. ಶಿವರಾಮ್ ಇದ್ದರು.

# ಸರ್ಕಾರಿ ಶಾಲೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ

## ಕನ್ನಡ ರಾಜ್ಯೋತ್ಸವದಲ್ಲಿ ನಟ ಡಾಲಿ ಧನಂಜಯ್ | ಬಂದ ದಾರಿ ಎಂದಿಗೂ ಮರೆಯದಿರಿ

• ಪ್ರಜೋದಯ ವರದಿ

**ಅರಸೀಕೆರೆ:** ದಾಖಲಾತಿ ಕೊರತೆ ನೆಪದಲ್ಲಿ ಸರ್ಕಾರಿ ಶಾಲೆಗಳು ಮುಚ್ಚಬಾರದು. ಒಂದು ಮಗುವಿದ್ದರೂ ಕೂಡ ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ ಎಂದು ನಟ ಡಾಲಿ ಧನಂಜಯ್ ಅವರು ಹೇಳಿದರು.

ನಗರದ ಬಸವರಾಜೇಂದ್ರ ಪ್ರೌಢ ಶಾಲಾ ಆವರಣದಲ್ಲಿ ಡಾಲಿ ಧನಂಜಯ್ ಬ್ರಿಗೇಡ್ ವತಿಯಿಂದ ಭಾನುವಾರ ರಾತ್ರಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಶಾಲೆಗಳು ಮುಚ್ಚಬಾರದು. ಹಳ್ಳಿಗಳಿಗೂ ಇಂದು ಶಾಲಾ ಬಸ್‌ಗಳು ತಲುಪುತ್ತವೆ. ಪಾಲಕರು ತಮ್ಮ ಮಕ್ಕಳನ್ನು ಕಷ್ಟವಾದರೂ ಖಾಸಗಿ ಶಾಲೆಗಳಿಗೆ ಸೇರಿಸುತ್ತಾರೆ. ಆದರೆ, ಬಡವರು ಹಳ್ಳಿಗಳಲ್ಲಿ ಇದ್ದೇ ಬಿಡುತ್ತಾರೆ. ಅಂತಹ



ಮಕ್ಕಳು ಕಲಿಕೆಯಿಂದ ಹಿಂದುಳಿಯಬಾರದು. ಬಡವರಿಗೆ ವಿದ್ಯಾಭ್ಯಾಸ ತಪ್ಪದಂತೆ ಎಚ್ಚರ ವಹಿಸಿ ಶಾಲೆ ಉಳಿಸಿಕೊಳ್ಳುವ ಜವಾಬ್ದಾರಿ ಎಲ್ಲರದ್ದಾಗಿದೆ. ನಾವೆಲ್ಲರೂ ಎಲ್ಲಿಂದ ಬಂದಿದ್ದೇವೆ, ಹೇಗೆ ಬದುಕುತ್ತಿದ್ದೇವೆಂಬುದು ಮುಖ್ಯವಾಗುತ್ತದೆ ಎಂದರು.

ಕನ್ನಡ ಭಾಷೆ, ನೆಲ, ಜಲದ ಸಂರಕ್ಷಣೆ ಪ್ರತಿಯೊಬ್ಬ ಕನ್ನಡಿಗನ ಆದ್ಯತೆಯಾಗಬೇಕಿದೆ. ಅತ್ಯಂತ ಶ್ರೀಮಂತ ಭಾಷೆಗಳ ಪೈಕಿ ಕನ್ನಡಕ್ಕೆ ಅಗ್ರಸ್ಥಾನವಿದೆ ಎನ್ನುವುದು ಹೆಮ್ಮೆಯ ಸಂಗತಿ. ಕರ್ನಾಟಕ ಏಕೀಕರಣಕ್ಕಾಗಿ ನಡೆದ ಹೋರಾಟವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಹಲವು ಮಹನೀಯರ ತ್ಯಾಗದ ಫಲವಾಗಿ

> **ನಮ್ಮೂರು ನಮಗೆ ಯಾವತ್ತೂ ಬೆಂಬಲವಾಗಿರುತ್ತದೆ. ಯಾವುದಾದರೂ ದೊಡ್ಡ ಸಾಧನೆ ಮಾಡಲು ಹಿಂಜರಿಯಬಾರದು. ಜೀವನದಲ್ಲಿ ಎಂತಹ ಸೋಲು ಬಂದರೂ ನಮ್ಮೂರು, ಅಲ್ಲಿನ ಜನರು ಬೆಳೆಸುತ್ತಾರೆಂಬ ಆತ್ಮ ವಿಶ್ವಾಸ ಇರಬೇಕು. ನಾನು ನಿರ್ಮಾಪಕನಾಗಲು ಊರ ಜನರ ಬೆಂಬಲವೇ ಕಾರಣ.**
> **-ಧನಂಜಯ, ನಟ**

ರಾಜ್ಯದ ಉದಯವಾಗಿದೆ. ತನ್ನದೇ ವಿಶೇಷತೆ ಹೊಂದಿರುವ ಭಾಷೆಯ ಹಿರಿಮೆ, ಗರಿಮೆಯನ್ನು ಪಸರಿಸುವ ಕೆಲಸವನ್ನು ಕನ್ನಡಪರ ಸಂಘಟನೆಗಳು ಮಾಡಿಕೊಂಡು ಬರುತ್ತಿವೆ. ಜನ್ಮ ಪಡೆದ ಕರ್ಮ ಭೂಮಿ, ಕಲಿತ ಭಾಷೆ, ಜೀವನಾಡಿಯಾಗಿರುವ ಜಲವನ್ನು ರಕ್ಷಿಸುವ ಗುರುತರ ಹೊಣೆ ಗಾರಿಕೆ ನಮ್ಮ ಮೇಲಿದೆ ಎಂಬುದನ್ನು ಮರೆಯಬಾರದು. ಕನ್ನಡ ರಾಜ್ಯೋತ್ಸವ ನವೆಂಬರ್ ತಿಂಗಳಿಗೆ ಸೀಮಿತವಾಗಬಾರದೆಂದರು.

**ಅರಸೀಕೆರೆಯಲ್ಲಿ ಸುಸಜ್ಜಿತ ಚಿತ್ರಮಂದಿರ**

ಕನ್ನಡ ಚಿತ್ರರಂಗಕ್ಕೆ ಬಹುದೊಡ್ಡ ಕೊಡುಗೆ ನೀಡಿರುವ ಜೊತೆಗೆ ವ್ಯಾಪಾರ ವಹಿವಾಟು ಕೇಂದ್ರವಾಗಿ ಗುರುತಿಸಿಕೊಂಡಿರುವ ಅರಸೀಕೆರೆ ನಗರದಲ್ಲಿ ಸುಸಜ್ಜಿತ ಚಿತ್ರಮಂದಿರ ಇಲ್ಲದಿರುವುದು ಬೇಸರದ ಸಂಗತಿ. ಪ್ರೇಕ್ಷಕರ ಹಿತ ಮನಗಂಡು ಆಧುನಿಕ ಶೈಲಿಯ ಚಿತ್ರಮಂದಿರ ಕಟ್ಟುವ ಕೆಲಸ ಮಾಡುವ ಸಂಕಲ್ಪ ಮಾಡಿದ್ದೇನೆ. ಸಿನಿಮಾ ವೀಕ್ಷಿಸಲು ಥಿಯೇಟರ್‌ಗಳತ್ತ ಜನರು ಬರುವಂತೆ ಮಾಡುವ ಕೆಲಸ ಆಗಬೇಕಿದೆ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

# ಪ್ರಜ್ವಲ್ ಜಾಮೀನಿಗಾಗಿ ಪ್ರಬಲ ವಾದ ಮಂಡನೆ

## ಸಾಕ್ಷ್ಯಗಳ ಸಂಶಯ ಮುಂದಿಟ್ಟು ಶಿಕ್ಷೆ ಅಮಾನತುಗೊಳಿಸಲು ಹೈಕೋರ್ಟ್‌ನಲ್ಲಿ ಮನವಿ

• ಪ್ರಜೋದಯ ವರದಿ

**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಮಾಜಿ ಸಂಸದ ಪ್ರಜ್ವಲ್ ಅವರ ಶಿಕ್ಷೆಯನ್ನು ಅಮಾನತ್ತಿನಲ್ಲಿಟ್ಟು, ಜಾಮೀನು ನೀಡುವಂತೆ ಹೈಕೋರ್ಟ್‌ಗೆ ಸಲ್ಲಿಸಿರುವ ಅರ್ಜಿ ವಿಚಾರಣೆ ಸೋಮವಾರ ನಡೆಯಿತು.

ನ್ಯಾಯಮೂರ್ತಿಗಳಾದ ಕೆ.ಎಸ್. ಮುದಗಲ್ ಮತ್ತು ಟಿ.ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ಪೀಠ ಅರ್ಜಿ ವಿಚಾರಣೆ ನಡೆಸಿತು. ಪ್ರಜ್ವಲ್ ಪರ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ ಪ್ರಬಲ ವಾದ ಮಂಡಿಸಿ ಸಂತ್ರಸ್ತೆಯ ಮೌನ, ಸಾಕ್ಷ್ಯಗಳ ಮೇಲಿನ ಸಂಶಯಗಳನ್ನು ಮುಂದಿಟ್ಟು ಶಿಕ್ಷೆ ಅಮಾನತುಗೊಳಿಸಿ ಜಾಮೀನು ನೀಡುವಂತೆ ಮನವಿ ಮಾಡಿದರು.

ಪ್ರಜ್ವಲ್ 2024 ಏಪ್ರಿಲ್ 24ರಂದು ದೇಶ ತೊರೆಯುವಾಗ ಅವರ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಐಫೋನ್ ವಶಕ್ಕೆ ನೀಡಿಲ್ಲವೆಂದು ಪ್ರಾಸಿಕ್ಯೂಷನ್ ಆರೋಪಿಸಿದೆ. ಐಫೋನ್ ನೀಡುವಂತೆ ಸೆ.91ರ ಅಡಿ ನೋಟೀಸ್ ನೀಡಿಲ್ಲ. ಐಎಂಇಐ ನಂಬರ್ ಆಧರಿಸಿ ಮೊಬೈಲ್ ಕಂಪನಿಯಿಂದ ಮಾಹಿತಿ ಪಡೆಯಲು ಯತ್ನಿಸಿಲ್ಲ. ಸಂತ್ರಸ್ತೆ ದೂರು ದಾಖಲಿಸದೇ 3 ವರ್ಷ ಮೌನವಾಗಿ ಇದ್ದಿದ್ದೇಕೆ. ಏಕ ಕಾಲಕ್ಕೆ ನಾಲ್ಕು ಪ್ರತ್ಯೇಕ ಕ್ರಿಮಿನಲ್ ಪ್ರಕರಣಗಳು ಹೇಗೆ ದಾಖಲಾದವೆಂದು ಪ್ರಶ್ನಿಸಿದರು.

**ಎಫ್ಎಸ್ಎಲ್ ಸಾಕ್ಷಿ ಬಗ್ಗೆ ಸಂಶಯ**

ಇದೇ ವೇಳೆ ಎಫ್ಎಸ್ಎಲ್ ಸಾಕ್ಷಿ ಬಗ್ಗೆ ಸಂಶಯ ವ್ಯಕ್ತಪಡಿಸಿದ ವಕೀಲ ಸಿದ್ಧಾರ್ಥ್ ಲೂಥ್ರಾ ಅವರು, ರಾಜಕೀಯ ದುರುದ್ದೇಶದಿಂದ ಈ ಪ್ರಕರಣಗಳನ್ನು ದಾಖಲಿಸಲಾಗಿದೆ. ಸಂತ್ರಸ್ತೆಯನ್ನು ಇಲ್ಲಿನ ಸರ್ಕಾರ ಬಳಸಿ ಕೇಸ್ ದಾಖಲಿಸಿದೆ. 2019, 2021ರಲ್ಲಿ ಅತ್ಯಾಚಾರಕ್ಕೆ ಒಳಗಾದರೂ 2023ರಲ್ಲಿ ಸಂತ್ರಸ್ತೆ ಬಂದಿದ್ದೇಕೆ. ಫಾರ್ಮ್‌ಹೌಸ್‌ಗೆ ಬಂದರೂ ಆಕೆಯ ಬಟ್ಟೆಗಳನ್ನು ಹಿಂಪಡೆಯಲಿಲ್ಲವೇಕೆ, ಪೊಲೀಸರು ಬಟ್ಟೆಯನ್ನು ವಶಕ್ಕೆ ಪಡೆದಿರುವುದೇ ಸಂಶಯಾಸ್ಪದವಾಗಿದೆ. ಡಿಎನ್ಎ ಪರೀಕ್ಷೆ ಮಾಡಿದ ವ್ಯಕ್ತಿಯೇ ಮೃತಪಟ್ಟಿದ್ದಾರೆ. ಹೀಗಾಗಿ ಎಫ್ಎಸ್ಎಲ್ ಸಾಕ್ಷಿ ಒಪ್ಪತಕ್ಕದ್ದಲ್ಲವೆಂದು ವಾದ ಮಂಡಿಸಿದರು.

ಹೀಗೆ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕಿದ ಪ್ರಜ್ವಲ್ ಪರ ವಕೀಲರ ವಾದ ಆಲಿಸಿದ ಹೈಕೋರ್ಟ್, ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿದೆ.

# ಗಣಿಗಾರಿಕೆಗೆ ಕಡಿವಾಣ ಹಾಕಲು ಒತ್ತಾಯಿಸಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ವಿವಿಧಡೆ ನಡೆಯುತ್ತಿರುವ ಕಾನೂನು ಬಾಹಿರ ಗಣಿಗಾರಿಕೆಗೆ ಕಡಿವಾಣ ಹಾಕುವಂತೆ ಒತ್ತಾಯಿಸಿ ವಿವಿಧ ಗ್ರಾಮಗಳ ಗ್ರಾಮಸ್ಥರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಶಾಂತಿಗ್ರಾಮ ಹೋಬಳಿ ವ್ಯಾಪ್ತಿಯ ಚಿಗಳ್ಳಿ, ಅಂಕನಹಳ್ಳಿ ಗ್ರಾಮಗಳಲ್ಲಿ ಕಲ್ಲು ಗಣಿಗಾರಿಕೆ ಹಾಗು ಕಲ್ಲುಪುಡಿ ಮಾಡುವ ಸ್ಟೋನ್ ಕ್ರಷರ್‌ಗಳು ನಡೆಯುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ಜಿಲ್ಲಾಡಳಿತಕ್ಕೆ ಹಲವು ಬಾರಿ ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆಂದು ಆರೋಪಿಸಿದರು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ನಿಯಮ ಉಲ್ಲಂಘಿಸಿ ಕ್ರಷರ್ ನಡೆಯುತ್ತಿರುವುದು ಕಂಡು ಬಂದಿದೆ. ನಿಯಮಾನುಸಾರ ಕಲ್ಲು ಗಣಿ ಗುತ್ತಿಗೆ ನಡೆಸುವ ಅಕ್ಕ ಪಕ್ಕದಲ್ಲಿ ದೇವಸ್ಥಾನ, ಕೆರೆ,

» ಮೂರನೇ ಪುಟದಲ್ಲಿ

# ರಾಜ್ಯೋತ್ಸವ ಪಶಸ್ತಿ ಪುರಸ್ಕೃತೆ ಹೆಚ್.ಎಂ.ಮೋಹಿನಿ ನಿಧನ

• ಪ್ರಜೋದಯ ವರದಿ

**ಹಾಸನ:** ರಾಜ್ಯೋತ್ಸವ ಪಶಸ್ತಿ ಪುರಸ್ಕೃತರು, ಮಾಜಿ ಶಾಸಕ ಹೆಚ್. ಎಂ.ವಿಶ್ವನಾಥ್ ಅವರ ಸಹೋದರಿ ಹೆಚ್.ಎಂ.ಮೋಹಿನಿ ಸಿದ್ದೇಗೌಡ ಅವರು ಸೋಮವಾರ ಮುಂಜಾನೆ ನಿಧನರಾದರು.



ಸಕಲೇಶಪುರ ತಾಲ್ಲೂಕಿನ ಹಂಜಗೋಡನಹಳ್ಳಿ ಗ್ರಾಮದವರಾದ ಮೋಹಿನಿ ಅವರು, ಬೇಲ್ಲೂರು ತಾಲ್ಲೂಕು ಬೆಣ್ಣೂರು ಗ್ರಾಮದ ಸಿದ್ದೇಗೌಡ ಅವರನ್ನು ವಿವಾಹವಾಗಿ, ಚಿಕ್ಕಮಗಳೂರಿನಲ್ಲಿ ಹಲವು ವರ್ಷಗಳಿಂದ ನೆಲೆಸಿದ್ದರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಸೋಮವಾರ ಮುಂಜಾನೆ ನಿಧರಾದರು. ಪಾರ್ಥಿವ ಶರೀರವನ್ನು ಬೆಳಿಗ್ಗೆ ಚಿಕ್ಕಮಗಳೂರಿನ ಸ್ವಗೃಹದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಮಧ್ಯಾಹ್ನದ ನಂತರ ಮೂಡಿಗೆರೆ ತಾಲ್ಲೂಕಿನ ಮುದ್ರೆಮನೆ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಅಂತಿಮ ದರ್ಶನದ ಬಳಿಕ ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಯಿತು.

ಕಸ್ತೂರಿಬಾ ಸದನ, ಕೌಂಟುಂಬಿಕ ಸಲಹಾ ಕೇಂದ್ರ, ಮಹಿಳಾ ಸಾಂತ್ವನ ಕೇಂದ್ರದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದರು. ಚಿಕ್ಕಮಗಳೂರು ನಗರಸಭೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಸಹಕಾರ ಕ್ಷೇತ್ರ ಸೇರಿ ಹಲವು ಸಂಘ-ಸಂಸ್ಥೆಗಳಲ್ಲಿ ಕೆಲಸ ಮಾಡಿಕೊಂಡು ಬಂದಿದ್ದ ಅವರಿಗೆ 2019-20 ನೇ ಸಾಲಿನಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

# ಜನರ ಕುಂದು ಕೊರತೆ ಆಲಿಕೆಗೆ ನಗರಪಾಲಿಕೆ ಸಹಾಯವಾಣಿ

**ಹಾಸನ:** ಸಾರ್ವಜನಿಕರ ಸಮಸ್ಯೆಗಳಿಗೆ ತುರ್ತಾಗಿ ಸ್ಪಂದಿಸಲು ಮಹಾನಗರ ಪಾಲಿಕೆ ಸಹಾಯವಾಣಿ ತೆರೆದಿದ್ದು, ಪ್ರತಿದಿನ ಬೆಳಿಗ್ಗೆ 5 ರಿಂದ ರಾತ್ರಿ 10 ಗಂಟೆವರೆಗೆ ಕರೆ ಮಾಡಬಹುದು.

ತ್ವರಿತ ಮತ್ತು ಉತ್ತಮ ಸೇವೆ ಒದಗಿಸಲು ಸಾರ್ವಜನಿಕ ಸಹಾಯವಾಣಿಯನ್ನು ಕಚೇರಿಯಲ್ಲಿ ತೆರೆಯಲಾಗಿದೆ. ಬೀದಿ ದೀಪ, ನೀರು ಸರಬರಾಜು, ಬೀದಿ ನಾಯಿ ಹಾವಳಿ, ಒಳಚರಂಡಿ, ಸ್ವಚ್ಛತೆ, ಖಾತೆ ಮಾಹಿತಿ ಒಳಗೊಂಡಂತೆ ಯಾವುದೇ ದೂರುಗಳಿದ್ದರೆ ದೂರವಾಣಿ ಸಂ. 08172-260700 ಅಥವಾ ಮೊ.ನಂ. 7411110719 ಇಲ್ಲಿಗೆ ಕರೆ ಮಾಡಬಹುದು.

ಹಾಸನ ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ್ದು, ವ್ಯಾಪ್ತಿ ವಿಸ್ತಾರಗೊಂಡಿದೆ. 35 ವಾರ್ಡ್‌ಗಳೊಂದಿಗೆ ಸುತ್ತಲಿನ 37 ಗ್ರಾಮಗಳು ಪಾಲಿಕೆಗೆ ಸೇರಿರುವುದರಿಂದ ಸಾರ್ವಜನಿಕರ ದೂರುಗಳು ಹೆಚ್ಚಿವೆ. ಜನಸ್ನೇಹಿ ಆಡಳಿತ ವ್ಯವಸ್ಥೆಗಾಗಿ ಸಹಾಯವಾಣಿ ತೆರೆಯಲಾಗಿದ್ದು, ನಾಗರಿಕರು ಸದುಪಯೋಗ ಪಡೆಯಬೇಕೆಂದು ಪೌರಾಯುಕ್ತ ಆರ್.ಕೃಷ್ಣಮೂರ್ತಿ ಅವರು ತಿಳಿಸಿದ್ದಾರೆ.

## ಕೋಗೋಡಿನಲ್ಲಿ 16, ಮೊಗಸಾವರದಲ್ಲಿ 32 ಗಜಪಡೆ ಪ್ರತ್ಯಕ್ಷ | ಬೆಳೆ ನಾಶ , ರೈತರ ಸ್ಥಿತಿ ಚಿಂತಾಜನಕ


# ಫಸಲು ಕೈಸೇರುವ ಹೊತ್ತಲ್ಲಿ ಕಾಡಾನೆಗಳ ದಾಂಧಲೆ

• ಪ್ರಜೋದಯ ವರದಿ

**ಹಾಸನ :** ಬೆಳೆದ ಫಸಲು ಇನ್ನೇನು ಕೈಸೇರಬೇಕೆನ್ನುವಷ್ಟರಲ್ಲಿ ಮಲೆನಾಡು ಭಾಗದಲ್ಲಿ ಕಾಡಾನೆಗಳ ಹಾವಳಿ ತೀವ್ರಗೊಂಡಿದೆ. ಬೇಲೂರು ಮತ್ತು ಸಕಲೇಶಪುರ ತಾಲ್ಲೂಕು ಭಾಗದಲ್ಲಿ ಗುಂಪು ಗುಂಪಾಗಿ ಜಮೀನಿಗೆ ಲಗ್ಗೆ ಇಡುವ ಗಜಪಡೆ, ಅಪಾರ ಪ್ರಮಾಣದ ಬೆಳೆ ನಾಶ ಮಾಡುತ್ತಿವೆ.

ಬೇಲೂರು ತಾಲ್ಲೂಕಿನ ಕೋಗೋಡು ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ 16ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಕಾಣಿಸಿಕೊಂಡು, ಸ್ಥಳೀಯರಲ್ಲಿ ಆತಂಕ ಸೃಷ್ಟಿ ಮಾಡಿವೆ. ಬೇಲೂರು ತಾಲ್ಲೂಕಿನ ಮೊಗಸಾವರ ಗ್ರಾಮದಲ್ಲಿ 32 ಕಾಡಾನೆಗಳ ಹಿಂಡು ದಾಳಿ ನಡೆಸಿ 10 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಬೆಳೆದಿದ್ದ ಬೆಳೆಯನ್ನು ತಿಂದು-ತುಳಿದು ನಾಶ ಮಾಡಿವೆ.

ಕೋಗೋಡು ಗ್ರಾಮದಲ್ಲಿ ಸೋಮವಾರ ಬೆಳಿಗ್ಗೆ ಕಾಡಾನೆಗಳ ದೊಡ್ಡ ಹಿಂಡು ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕ ಉಂಟು ಮಾಡಿವೆ. ಸುಮಾರು 16 ಕಾಡಾನೆಗಳು, ಅದರಲ್ಲಿ ಹಲವು ಮರಿ ಆನೆಗಳೂ ಸೇರಿ, ನಿರ್ಭೀತಿಯಿಂದ ಕಾಫಿ ತೋಟಗಳ ಮಧ್ಯೆ



ಹಾಗು ಗ್ರಾಮದ ರಸ್ತೆಯಲ್ಲಿ ಓಡಾಡಿರುವ ದೃಶ್ಯ ಗ್ರಾಮಸ್ಥರನ್ನು ಬೆಚ್ಚಿಬೀಳಿಸಿದೆ.

ಮನೆಗಳ ಸಮೀಪ ಹಾದು ಬಂದ ಕಾಡಾನೆಗಳನ್ನು ಗ್ರಾಮಸ್ಥರು ಪಟಾಕಿ ಸಿಡಿಸಿ ಓಡಿಸಲು ಪ್ರಯತ್ನಿಸಿದರೂ, ಆನೆಗಳು ಭಯಪಡೆ ನಿಧಾನವಾಗಿ ಮುಂದೆ ಸಾಗಿ ಹೋಗಿವೆ. ಭಯಭೀತರಾದ ಜನರು ಕೂಡಲೇ ರಾಪಿಡ್ ರೆಸ್ಪಾನ್ಸ್ ಟೀಂ (ಆರ್‌ಆರ್‌ಟಿ) ಸಿಬ್ಬಂದಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಸಿಬ್ಬಂದಿ, ಕಾಡಾನೆಗಳ ಚಲನವಲನಗಳ ಮೇಲೆ ನಿಗಾವಹಿಸಿ, ಜನರಿಗೆ ಸುರಕ್ಷಿತ ಸ್ಥಳದಲ್ಲಿ ಇರುವಂತೆ ಸಲಹೆ ನೀಡಿದ್ದಾರೆ. ಕೋಗೋಡು ಹಾಗು ಸುತ್ತಲಿನ ಪ್ರದೇಶಗಳಲ್ಲಿ ಕಳೆದ ಕೆಲವು ವಾರಗಳಿಂದ ಕಾಡಾನೆಗಳ ಸಂಚಾರ ಹೆಚ್ಚಾಗಿರುವುದು ರೈತರನ್ನು ಚಿಂತೆಗೀಡು ಮಾಡಿವೆ.

**ರೈತರ ಆಕ್ರೋಶ**

ಬೇಲೂರು ತಾಲ್ಲೂಕಿನ ಕುಶವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೊಗಸಾವರ ಗ್ರಾಮಕ್ಕೆ 32 ಕಾಡಾನೆಗಳ ದೊಡ್ಡ ಗುಂಪೊಂದು ನುಗ್ಗಿ, 10 ಎಕರೆ ಪ್ರದೇಶದಲ್ಲಿದ್ದ ಬೆಳೆದಿದ್ದ ಕಾಫಿ, ಬಾಳೆ, ಏಲಕ್ಕಿ, ಮೆಣಸು ಹಾಗು ಭತ್ತದ ಬೆಳೆಗಳನ್ನು ಸಂಪೂರ್ಣವಾಗಿ ನಾಶ ಮಾಡಿವೆ.

ಕಾಡಾನೆಗಳ ದಾಂಧಲೆಯಿಂದ ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣಗೊಂಡಿದೆ. ಫಸಲಿಗೆ ಬಂದಿರುವ ಬೆಳೆ ಉಳಿಸಿಕೊಳ್ಳಲು ರೈತರು ರಾತ್ರಿಯಿಡೀ ಜಮೀನಿನಲ್ಲಿ ಜಾಗರಣೆ ಮಾಡುವಂತಾಗಿದೆ. ಕಾಡಾನೆಗಳ ದಾಳಿಯಿಂದಾಗುವ ನಷ್ಟಕ್ಕೆ ಪರಿಹಾರ, ಆನೆಗಳ ಸ್ಥಳಾಂತರ ಮತ್ತು ಕಾಡು ಪ್ರಾಣಿಗಳು-ಮಾನವ ಸಂಘರ್ಷ ನಿಯಂತ್ರಣಕ್ಕೆ ಶಾಶ್ವತ ಪರಿಹಾರಕ್ಕಾಗಿ ಸ್ಥಳೀಯರು ಹಲವಾರು ವರ್ಷಗಳಿಂದ ಮನವಿ ಮಾಡಿಕೊಂಡರೂ, ಸಮಸ್ಯೆಗೆ ಕ್ರಮ ಕೈಗೊಳ್ಳದ ಹಿನ್ನಲೆ ರೈತರ ಆಕ್ರೋಶ ಹೆಚ್ಚಾಗಿದೆ.

ಕಾಫಿ ಬೆಳೆಗಾರರ ಸಂಘದ ಹೋಬಳಿ ಅಧ್ಯಕ್ಷ ಅದ್ದೂರಿ ಕುಮಾರ್ ಅವರು ಮಾತನಾಡಿ, ನಾವು ಹಲವು ವರ್ಷಗಳಿಂದ ಕಾಡಾನೆಗಳ ಸ್ಥಳಾಂತರ, ಗ್ರಾಮ ರಕ್ಷಣಾ ಗೇಟ್ ವ್ಯವಸ್ಥೆ ಹಾಗು ಅರಣ್ಯ ಇಲಾಖೆ ಸಿಬ್ಬಂದಿ ಹೆಚ್ಚಳಕ್ಕಾಗಿ ಮನವಿ ಮಾಡುತ್ತಿದ್ದೇವೆ. ಆದರೆ, ಅರಣ್ಯ ಸಚಿವರು ಮತ್ತು ಇಲಾಖೆ ಕೇವಲ ಸಭೆ ನಡೆಸಿ ಭರವಸೆ ನೀಡುವುದರಲ್ಲೇ ಕೆಲಸ ಮುಗಿಸಿಕೊಂಡಿದ್ದಾರೆ. ಶಾಶ್ವತ ಪರಿಹಾರಕ್ಕೆ ಕ್ರಮ ಕೈಗೊಳ್ಳದೇ ಬೇಜವಾಬ್ದಾರಿ ತೋರಿಸಿದ್ದಾರೆ. ಕಾಡಾನೆ ಸಮಸ್ಯೆಗೆ ಸರ್ಕಾರ ತಕ್ಷಣ ಸ್ಪಂದಿಸದಿದ್ದರೆ, ಸರ್ಕಾರ, ಅರಣ್ಯ ಸಚಿವರು ಮತ್ತು ಅರಣ್ಯಾಧಿಕಾರಿಗಳ ವಿರುದ್ಧ ಬೇಲೂರು ಬಂದ್ ನಡೆಸಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

### ಕಾಡಾನೆ ಇಲ್ಲವೇ, ಜನರನ್ನೇ ಸ್ಥಳಾಂತರಿಸಿ

ಪ್ರತಿ ಬಾರಿ ಪರಿಹಾರ ಎಂಬ ಹೆಸರಿನಲ್ಲಿ ಬಿಡಿಗಾಸು ನೀಡಿ, ಸರ್ಕಾರ ಕೈತೊಳೆದುಕೊಳ್ಳುತ್ತಿದೆ. ನಮ್ಮ ಜೀವ, ಕುಟುಂಬಗಳ ಭದ್ರತೆ, ಕಾರ್ಮಿಕರ ರಕ್ಷಣೆಗೆ ಕ್ರಮ ಕೈಗೊಂಡಿಲ್ಲ. ನಮಗೆ ನಷ್ಟಕ್ಕೆ ಪರಿಹಾರ ಬೇಡ. ಕಾಡಾನೆಗಳನ್ನು ಸ್ಥಳಾಂತರಿಸಿ ಇಲ್ಲವೇ, ನಮ್ಮನ್ನೇ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಮೂಲಕ ಶಾಶ್ವತ ಪರಿಹಾರ ನೀಡಬೇಕೆಂದು ರೈತರು ಆಗ್ರಹಿಸಿದ್ದಾರೆ.

# ಹೋಬಳಿಗೊಂದು ಸರ್ಕಾರಿ ವಸತಿ ಶಾಲೆ

• ಪ್ರಜೋದಯ ವರದಿ

**ದಾವಣಗೆರೆ:** ಸರ್ಕಾರಿ ವಸತಿ ಶಾಲೆಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಪ್ರತಿ ಹೋಬಳಿಗೊಂದು ವಸತಿ ಶಾಲೆ ತೆರೆಯಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಬಾಕಿ ಇರುವ 65 ಹೋಬಳಿಗಳಲ್ಲಿ ಮುಂದಿನ 2 ವರ್ಷಗಳಲ್ಲಿ ವಸತಿ ಶಾಲೆ ತೆರೆಯಲಾಗುವುದೆಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಾಮಾನ್ಯ ಶಾಲೆಗಳಿಗೆ ಹೋಲಿಸಿದರೆ ಸರ್ಕಾರಿ ವಸತಿ ಶಾಲೆಗಳಲ್ಲಿ ಫಲಿತಾಂಶ ಉತ್ತಮವಾಗಿದೆ. ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.94 ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದಾರೆ. ವಸತಿ ಶಾಲೆಗಳಲ್ಲಿ ಸ್ಥಳೀಯರಿಗೆ ಶೇ. 50ರಷ್ಟು ಸೀಟು ಹಂಚಿಕೆ ಮಾಡಲಾಗುತ್ತಿದೆ. ಅಲೆಮಾರಿ, ದೇವದಾಸಿ, ಚಿಂದಿ ಆಯುವ ಪಾಲಕರ ಮಕ್ಕಳಿಗೆ ಶೇ. 10ರಷ್ಟು ಸೀಟು ಮೀಸಲಿಡಲಾಗುತ್ತದೆ ಎಂದು ಹೇಳಿದರು.

# ಹೆಚ್.ಐ.ವಿ. ಪೀಡಿತರಿಗೆ ಧೈರ್ಯ ತುಂಬುವುದು ಅತ್ಯಗತ್ಯ

• ಪ್ರಜೋದಯ ವರದಿ

**ಹಾಸನ:** ಹೆಚ್.ಐ.ವಿ ಪೀಡಿತರನ್ನು ನಿರ್ಲಕ್ಷ್ಯ ಮಾಡಿ, ತುಚ್ಛವಾಗಿ ನೋಡುವ ಬದಲು ಅವರು ಕೂಡ ಸಮಾಜದಲ್ಲಿ ಒಬ್ಬರು ಎಂದು ಭಾವಿಸಿ, ಧೈರ್ಯ ತುಂಬಿ ವೈದ್ಯಕೀಯ ತಪಾಸಣೆ ಪಡೆದುಕೊಳ್ಳುವಂತೆ ಸಲಹೆ ನೀಡಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಜಿ.ಕೆ. ಅವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಸನ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಜಿಲ್ಲಾ ಶಾಖೆ, ಲಯನ್ಸ್ ಕ್ಲಬ್, ರೋಟರಿ ಕ್ಲಬ್ ಹಾಸನ, ಸಮುದಾಯ ಆಧಾರಿತ ಸ್ವಯಂ ಸೇವಾ ಸಂಸ್ಥೆಗಳು, ಎನ್.ಎಸ್.ಎಸ್. ಘಟಕಗಳು ಮತ್ತು ರೆಡ್ ರಿಬ್ಬನ್ ಕ್ಲಬ್‌ಗಳ ಸಂಯುಕ್ತಾಶ್ರಯದಲ್ಲಿ ಸೋಮವಾರ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಆಯೋಜಿಸಿದ್ದ ವಿಶ್ವ ಏಡ್ಸ್ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿಶ್ವ ಆರೋಗ್ಯ ಸಂಸ್ಥೆ ಕೈಗೊಂಡ ನಿರ್ಣಯದ ಪ್ರಕಾರ ವಿಶ್ವದಾದ್ಯಂತ 1988 ರಿಂದ ಏಡ್ಸ್ ದಿನಾಚರಣೆ ಆಚರಿಸಲಾಗುತ್ತಿದೆ. ಇದರ ಉದ್ದೇಶ ಜಾಗತಿಕ ಮಟ್ಟದಲ್ಲಿ ಪ್ರತಿಯೊಬ್ಬರಿಗೂ ಏಡ್ಸ್ ಕುರಿತಾಗಿ ತಿಳುವಳಿಕೆ ನೀಡುವ ಉದ್ದೇಶದಿಂದ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಏಡ್ಸ್ ಕುರಿತು ಜನರು ಹೊಂದಿರುವಂತಹ ಮೂಢನಂಬಿಕೆಗಳು, ತಪ್ಪು ಭಾವನೆಗಳನ್ನು ಹೋಗಲಾಡಿಸುವುದಕ್ಕಾಗಿ ಸಂಘ-ಸಂಸ್ಥೆಗಳು ಸಾಕಷ್ಟು ಪ್ರಯತ್ನ ಮಾಡುತ್ತಿವೆ. ಏಡ್ಸ್ ರೋಗ ಬಂದಂತಹ ರೋಗಿಗಳನ್ನು ಅವರು ಸಂಧಿಸಿ ಅವರಿಗೆ ವೈದ್ಯಕೀಯ ತಪಾಸಣೆ ಪಡೆದುಕೊಳ್ಳಲು ಸೂಕ್ತ ಮಾರ್ಗದರ್ಶನವನ್ನು ನೀಡಿ ಆ ರೋಗದಿಂದ ಅವರನ್ನು ವಿಮುಕ್ತಗೊಳಿಸಲು ಶ್ರಮಿಸುತ್ತಿದ್ದಾರೆ, ಇವರ ಈ ಕೆಲಸ ಶ್ಲಾಘನೀಯವಾಗಿದೆ ಎಂದರು.



ನಮ್ಮಿಂದ ಸಾಧ್ಯವಾದಷ್ಟು ಅವರಿಗೆ ಸಹಾಯ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರವು ಅನೇಕ ಯೋಜನೆಗಳನ್ನು ಕೂಡ ಜಾರಿಗೊಳಿಸಿದೆ ಇವುಗಳ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡಬೇಕು. ಇದಕ್ಕೆ ಯುವಜನತೆಯ ಪಾತ್ರ ಮಹತ್ವದ್ದಾಗಿದೆ. ಯುವಜನರು ದೇಶವನ್ನು ಕಟ್ಟುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ ಹಾಗಾಗಿ ಇಂತಹ ಕೃತ್ಯಗಳು ಆಗದಂತೆ ಯುವ ಜನತೆ ಎಚ್ಚರ ವಹಿಸಬೇಕು. ಜೊತೆಗೆ ತಮ್ಮ ಸುತ್ತಮುತ್ತಲಿನವರಿಗೂ ಈ ರೋಗದ ಕುರಿತು ಜಾಗೃತಿ ಮೂಡಿಸಬೇಕು. ಎಲ್ಲರೂ ಕೈಜೋಡಿಸಿದರೆ ಮಾತ್ರ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂದು ತಿಳಿಸಿದರು.

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಡಾ|| ರಾಜಣ್ಣ ಅವರು ಮಾತನಾಡಿ, ಹೆಚ್.ಐ.ವಿ ಸೋಂಕಿನ ಬಗೆಗೆ ನಾವು ತಿಳಿದುಕೊಂಡು ಮತ್ತೊಬ್ಬರಿಗೂ ಇದರ ಕುರಿತಾಗಿ ಅರಿವು ಮೂಡಿಸಲು ಈ ದಿನಾಚರಣೆ ಪ್ರಯೋಜನಕರವಾಗಿದೆ. ಹೆಚ್.ಐ.ವಿ ಸೋಂಕು ಹರಡಿದೆ ಇಲ್ಲವೇ ಎಂಬುದನ್ನು ಪತ್ತೆ ಹಚ್ಚುವ ವೇಳೆ ಕೆಲವೊಮ್ಮೆ ಪಾಸಿಟಿವ್ ಮತ್ತೆ ಕೆಲವೊಮ್ಮೆ ನೆಗೆಟಿವ್ ರಿಪೋರ್ಟ್ ಬರುತ್ತದೆ. ಆ ಸಂದರ್ಭದಲ್ಲಿ ವೈದ್ಯಕೀಯ, ಅರೆ ವೈದ್ಯಕೀಯ ಸಂಸ್ಥೆಗಳು, ವೈದ್ಯರು ಕಾನೂನು ರೀತಿಯಾಗಿ ಹೋರಾಟ ಮಾಡಬೇಕಾಗುತ್ತದೆ ಎಂದರು.

ಹೆಚ್.ಐ.ವಿ ಸೋಂಕಿನಿಂದ ಯಾರೂ ಸಾಯುವುದಿಲ್ಲ. ಆ ಕಾರಣದಿಂದ ಬೇರೆ ಕಾಯಿಲೆಗಳು ಬರುವಂತಹ ಹೂಗಳಾಗಿವೆ. ಪ್ರಮುಖವಾಗಿ ಹೆಚ್.ಐ.ವಿ ರೋಗ ಹರಡುವುದು ಹಸುರಕ್ಷಿತ ಲೈಂಗಿಕ ಕ್ರಿಯೆ ಡ್ರಗ್ ನಂತಹ ವ್ಯಸನಗಳಿಗೆ ದಾಸರಾಗಿರುವುದರಿಂದ ಒಳಗಾಗುವುದರಿಂದ ಹೆಚ್.ಐ.ವಿ ಸೋಂಕು ಹರಡುತ್ತದೆ. ಸೋಂಕು ಹರಡಿದಂತಹ ವೈದ್ಯಕೀಯ ಸೇವೆಗಾಗಿ ತಪಾಸಣೆಗೆ ಬಂದಾಗ ವೈದ್ಯರು ಚಿಕಿತ್ಸೆ ಕೊಡುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಇದನ್ನು ಹೋಗಲಾಡಿಸುವುದು ವೈದ್ಯರು ಸಾರ್ವಜನಿಕರು ವಿದ್ಯಾರ್ಥಿಗಳು ಸಂಘ ಸಂಸ್ಥೆಗಳ ಜವಾಬ್ದಾರಿಯಾಗಿದೆ ಎಂದು ನಿರ್ದೇಶಕರಾದ ರಾಜಣ್ಣ ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಮಾಣ ವಚನವನ್ನು ಭೋಧಿಸಲಾಯಿತು ಹಾಗೂ ಜಿಲ್ಲೆಯಲ್ಲಿ ಹೆಚ್.ಐ.ವಿ ಸೋಂಕಿತರಿಗೆ ಉತ್ತಮವಾಗಿ ಚಿಕಿತ್ಸೆ ನೀಡಿರುವ ಹಿಮ್ಸ್‌ನ ಡಾ|| ಶಿವರಾಜ್ ಹಾಗೂ ಶಾಂತಿಗ್ರಾಮ ಆರೋಗ್ಯ ಕೇಂದ್ರದ ಆಡಳಿತ ಅಧಿಕಾರಿಗಳಾದ ಡಾ||ಸಂಧ್ಯಾ ಅವರನ್ನು ಸನ್ಮಾನಿಸಲಾಯಿತು ಹಾಗೂ ಏಡ್ಸ್ ಕುರಿತು ಕಿರು ನಾಟಕ ಪ್ರದರ್ಶನ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿಮ್ಸ್ ಪ್ರಾಂಶುಪಾಲರಾದ ಡಾ|| ಕವಿತಾ ಸಿ.ವಿ, ವೈದ್ಯಕೀಯ ಅಧೀಕ್ಷಕರಾದ ಡಾ|| ರಾಘವೇಂದ್ರ ಪ್ರಸಾದ್ ಕೆ.ಯು., ಡಾ|| ತೇಜಸ್ವಿ ಇದ್ದರು.

## ಎಂಆರ್‌ಎಫ್ ಮೆಡಿಪಾಯಿಂಟ್ ತಂಡ ಪ್ರಥಮ



• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಅಗ್ರಹಾರ ಬನ್ನಿ ಮಂಟಪ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಹೊನಲು ಬೆಳಕಿನ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಎಂ.ಆರ್.ಎಫ್ ಮೆಡಿಪಾಯಿಂಟ್ ಮಾಲೀಕತ್ವದ ತಂಡ ಪ್ರಥಮ ಬಹುಮಾನವಾಗಿ ಆಕರ್ಷಕ ಪಾರಿತೋಷಕ ಹಾಗು 50 ಸಾವಿರ ರೂ. ನಗದು ಗಳಿಸಿದೆ. ಭಜರಂಗದಳ ರಘು ಮಾಲೀಕತ್ವದ ತಂಡ 2ನೇ ಬಹುಮಾನ 30 ಸಾವಿರ ರೂ. ನಗದು ಮತ್ತು ಪಾರಿತೋಷಕ, 3ನೇ ಬಹುಮಾನವನ್ನು ನಿಖಿಲ್ ಬ್ರದರ್ಸ್ ತಂಡ 20 ಸಾವಿರ ರೂ. ನಗದು ಬಹುಮಾನ ಹಾಗು ಪಾರಿತೋಷಕ ಪಡೆದರೆ, ನಾಲ್ಕನೇ ಬಹುಮಾನವನ್ನು ಎಸ್.ಕೆ.ಪಿ. ಅಟ್ಯಾಕರ್ಸ್ ತಂಡ 10 ಸಾವಿರ ರೂ. ನಗದು ಹಾಗು ಪಾರಿತೋಷಕ ಗಳಿಸಿದೆ.

ಎರಡು ದಿನ ನಡೆದ ಹೊನಲು ಬೆಳಕಿನ ಕಬ್ಬಡಿ ಪಂದ್ಯಾವಳಿಯಲ್ಲಿ ಅನೇಕ ತಂಡಗಳು ಭಾಗವಹಿಸಿದ್ದವು. ಪುರಸಭೆ ಮಾಜಿ ಉಪಾಧ್ಯಕ್ಷ ಮುಕೇಶ್ ಶೆಟ್ಟಿ, ವಕೀಲ ಷಣ್ಮುಖ, ಮಿಲ್ ರವಿ, ಎಂ.ಆರ್.ಎಫ್. ಮೆಡಿಪಾಯಿಂಟ್ ತಂಡದ ಮಾಲೀಕರಾದ ಲೋಹಿತ್, ನವೀನ್, ಆಯೋಜಕರಾದ ಕುಮಾರ, ರೇವಣ್ಣ, ಸ್ವಾಮಿ, ವರದ ಇನ್ನಿತರರಿದ್ದರು.

## ಪರವಾನಗಿ ಪಡೆಯದೆ ವಾಹನ ಚಲಾಯಿಸಬೇಡಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ವತಿಯಿಂದ ರಸ್ತೆ ಅಪಘಾತದ ಹುತಾತ್ಮರ ಸ್ಮರಣೆ ಹಾಗೂ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜು, ರಾಜೀವ್ ಆಯುರ್ವೇದ ಕಾಲೇಜು ಮತ್ತು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಅಧ್ಯಯನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಹಮ್ಮಿಕೊಳ್ಳಲಾಗಿತ್ತು.

ರೆಡ್ ಕ್ರಾಸ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಎಸ್.ಎಸ್.ಪಾಷ ಮಾತನಾಡಿ, ಹಾಸನ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದಲ್ಲಿ 650 ಜನ ಹಾಗೂ ದೇಶದಲ್ಲಿ ಒಂದು ವರ್ಷದಲ್ಲಿ 1,65,000 ಜನರು ರಸ್ತೆ ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.



ಅಪ್ರಾಪ್ತ ವಯಸ್ಸಿನ ಯುವ ಜನರು ಯಾವುದೇ ಕಾರಣಕ್ಕೂ ಲೈಸೆನ್ಸ್ ಪಡೆಯದೆ ವಾಹನ ಚಲಾಯಿಸಿದರೆ ಅವರ ತಂದೆ, ತಾಯಿಯರು ಕಾನೂನು ಅಡಿಯಲ್ಲಿ ದಂಡ ಹಾಗೂ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದರಲ್ಲದೆ, ಮೊಬೈಲ್ ಹಿಡಿದು ವಾಹನ ಚಾಲನೆ, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವುದನ್ನು ಸಂಪೂರ್ಣವಾಗಿ ತ್ಯಜಿಸಬೇಕು ಎಂದು ಕಿವಿಮಾತು ಹೇಳಿದರು.

ಪ್ರಾಂಶುಪಾಲರಾದ ರಾಜೀವ್ ಆಯುರ್ವೇದ ಕಾಲೇಜಿನ ಡಾ.ನಿತಿನ್, ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ವಿಜಯಕುಮಾರ್ ಹಾಗೂ ಅಧ್ಯಯನ ಪದವಿ ಪೂರ್ವ ಕಾಲೇಜಿನ ಹೇಮಂತ್‌ಕುಮಾರ್ ಅವರ ನೇತೃತ್ವದಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಹೆಮ್ಮಿಗೆ ಮೋಹನ್, ಶಬ್ಬೀರ್ ಅಹ್ಮದ್, ಜಯೇಂದ್ರಕುಮಾರ್, ಬಿ. ಆರ್.ಉದಯ್‌ಕುಮಾರ್, ಎಚ್.ಡಿ. ಕುಮಾರ್, ಸುಬ್ಬುಸ್ವಾಮಿ, ಗಿರಿಗೌಡ, ಗಿರೀಶ್, ಭೀಮರಾಜ್, ಸಂಯೋಜಕ ಅವಿನಾಶ್ ಭಾಗವಹಿಸಿದ್ದರು.

## ವಿವಿಧೆಡೆ ಕೆಲಸ ಮಾಡುತ್ತಿದ್ದ 5 ಕಿಶೋರ ಕಾರ್ಮಿಕರ ರಕ್ಷಣೆ

• ಪ್ರಜೋದಯ ವರದಿ

**ಹಾಸನ:** ಆಲೂರು ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾದ ಬಾಲ ಹಾಗೂ ಕಿಶೋರ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಹಿನ್ನೆಲೆಯಲ್ಲಿ ನಗರದ ಡಿ.ಎಂ. ಡಬ್ಲ್ಯೂ ಮೋಟಾರ್ಸ್, ಹೇಮಾವತಿ ಆಸ್ಪತ್ರೆ ರಸ್ತೆ, ಅರಳಿಪೇಟೆ ವೃತ್ತ ಹಾಸನ ಹಾಗೂ ಗುಂಡಣ್ಣ ಬೇಕರಿ ಸ್ವೀಟ್ಸ್ ಆರ್.ಸಿ. ರಸ್ತೆ, ಹಾಸನ ಮತ್ತು ಜಿ.ಆರ್.ಆರ್. ಪೆಟ್ ಪ್ಲಾನೆಟ್‌ನಲ್ಲಿ ಒಟ್ಟು 3 ಕಿಶೋರ ಕಾರ್ಮಿಕರನ್ನು ಹಾಗೂ ಆಲೂರು ತಾಲ್ಲೂಕಿನ ಶಾಂತಿ ಗ್ರಾಮದ ಭರತ ಜಲ್ಲಿ ಕ್ರಷರ್‌ನಲ್ಲಿ ಓರ್ವ ಕಿಶೋರ ಕಾರ್ಮಿಕ ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಗ್ರಾಮದ ಎಲ್.ಜೆ. ಅಯ್ಯಂಗಾರ್ ಕೇಕ್ ಹೌಸ್ ಜ್ಯೂಸ್ ಸೆಂಟರ್‌ನಲ್ಲಿ ಓರ್ವ ಕಿಶೋರ ಕಾರ್ಮಿಕನನ್ನು ರಕ್ಷಣೆ ಮಾಡಲಾಗಿದೆ ಹಾಗೂ ತಪ್ಪಿತಸ್ಥ ಮಾಲೀಕರಿಗೆ ನೋಟಿಸ್ ನೀಡಲಾಗಿದೆ ಹಾಗೂ ಮೊಕದ್ದಮೆ ಹೂಡಲಾಗುವುದು ಎಂದು ತಿಳಿಸಲಾಗಿದೆ.



ಪಾಲನೆ- ಪೋಷಣೆ ರಕ್ಷಣೆಯ ಹಿತದೃಷ್ಟಿಯಿಂದ 4 ಕಿಶೋರ ಕಾರ್ಮಿಕರನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ಒಪ್ಪಿಸಲಾಗಿದೆ. ಹಾಗೂ ಉಳಿದ ಓರ್ವ ಕಿಶೋರ ಕಾರ್ಮಿಕರ ಪಾಲಕರಿಗೆ ಕರೆಸಿ ಶಿಕ್ಷಣದ ಮಹತ್ವ ತಿಳಿಸಿ, ಕೆಲಸಕ್ಕೆ ಕಳಿಸಿದಂತೆ ಎಚ್ಚರಿಕೆ ನೀಡಿ ಪಾಲಕರ ವಶಕ್ಕೆ ಒಪ್ಪಿಸಲಾಗಿದೆ.

ಕಾರ್ಯಾಚರಣೆಯಲ್ಲಿ ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಬಾಲ ಕಾರ್ಮಿಕ ಮತ್ತು ಕಿಶೋರಾವಸ್ಥೆ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ ಕಾಯ್ದೆ 1986 ಹಾಗೂ 2016)ರ ತಿದ್ದುಪಡಿ ಕಾಯ್ದೆಯಡಿ ನೇಮಕವಾದ ನಿರೀಕ್ಷಕರುಗಳಾದ, ಸಮಾಜ ಕಲ್ಯಾಣಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕೃಷಿ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಿಬ್ಬಂದಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ ಇವರೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ, ಎಸ್.ಜೆ.ಪಿ.ಯು ಘಟಕದ ಸಿಬ್ಬಂದಿಗಳು, ಮಕ್ಕಳ ಸಹಾಯವಾಣಿ ಸಿಬ್ಬಂದಿ ಮತ್ತು ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಎನ್.ಜಿ.ಓ ಇವರು ಪಾಲ್ಗೊಂಡಿದ್ದರು.

ಬಾಲ ಕಾರ್ಮಿಕ ಪದ್ಧತಿಯ ಕುರಿತು ಕರಪತ್ರ ಹಾಗೂ ಬಿತ್ತಿಪತ್ರ ಅಂಟಿಸುವುದರ ಮೂಲಕ ಸಾರ್ವಜನಿಕರಲ್ಲಿ ಹಾಗೂ ಅಂಗಡಿ, ವಿವಿಧ ಸಂಸ್ಥೆಗಳ ಮಾಲೀಕರಲ್ಲಿ ಅರಿವು ಮೂಡಿಸಲಾಯಿತು.

ಮಕ್ಕಳನ್ನು ಕಾನೂನು ಬಾಹಿರವಾಗಿ ಕೆಲಸಕ್ಕೆ ನೇಮಿಸಿಕೊಂಡಿದ್ದ ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಉದ್ದಿಮೆಯಲ್ಲಿ ಹಾಗೂ 14 ರಿಂದ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಕೆಲಸದಲ್ಲಿ ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಇಂತಹ ಮಕ್ಕಳು ಕೆಲಸದಲ್ಲಿ ತೊಡಗಿರುವುದು ಕಂಡು ಬಂದಲ್ಲಿ ಕಾರ್ಮಿಕ ಸಹಾಯವಾಣಿ 155214 ಹಾಗೂ ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಹಾಸನ ದೂ.ಸಂಖ್ಯೆ: 08172-235447 ಹಾಗೂ ಮಕ್ಕಳ ಸಹಾಯವಾಣಿ 1098ಕ್ಕೆ ಕರೆ ಮಾಡಬಹುದು.

## ಗಣಿಗಾರಿಕೆಗೆ ಕಡಿವಾಣ ಹಾಕಲು ಒತ್ತಾಯಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ಕೃಷಿ ಜಮೀನು, ಊರು, ಹೆಚ್ ಆರ್‌ಪಿ ಜಮೀನು, ಮೀಸಲು ಅರಣ್ಯ ಇತ್ಯಾದಿ ಇರಬಾರದೆಂಬ ನಿಯಮವಿದೆ. ಕಲ್ಲು ಗಣಿ ಗುತ್ತಿಗೆ ಹಾಗು ಸ್ಟೋನ್ ಕ್ರಷರ್ ನಡೆಸುವವರು ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಗ್ರಾಮಸ್ಥರಿಗೆ, ಕೃಷಿಕರಿಗೆ ಬೆದರಿಕೆಯೊಡ್ಡಿ ಗಣಿಗಾರಿಕೆ ಮತ್ತು ಸ್ಟೋನ್ ಕ್ರಷರ್ ನಡೆಸುತ್ತಿದ್ದಾರೆಂದು ಅವರು ದೂರಿದರು.

ಜಿಲ್ಲಾಧಿಕಾರಿ ಕೂಡಲೇ ಈ ಬಗ್ಗೆ ಗಮನಹರಿಸಿ ಗಣಿಗಾರಿಕೆ ನಿಲ್ಲಿಸಿ, ಕ್ರಷರ್‌ಗಳನ್ನು ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಮನವಿ ಮಾಡಿದರು. ಗ್ರಾಮಸ್ಥರಾದ ಸುನಿಲ್, ರಮೇಶ್, ಮಲ್ಲೇಶ್, ಯೋಗೇಶ್, ವರದರಾಜು, ಯೋಗೇಶ್ ಇದ್ದರು.

## ವಿಜ್ಞಾನ, ತಂತ್ರಜ್ಞಾನದ ಸವಾಲು ಎದುರಿಸಿ ಕನ್ನಡ ಬೆಳೆಯಬೇಕು

• ಪ್ರಜೋದಯ ವರದಿ

**ಹಳೇಬೀಡು:** ಕನ್ನಡ ಭಾಷೆ ವಿಜ್ಞಾನ, ತಂತ್ರಜ್ಞಾನದ ಸವಾಲುಗಳನ್ನು ಎದುರಿಸಿ ಬೆಳೆಯಬೇಕಾಗಿದೆ. ಕನ್ನಡಿಗರು ಪ್ರಾಚೀನತೆ ಹೊಂದಿರುವ ಕನ್ನಡ ಭಾಷೆಯನ್ನು ಬೆಳೆಸುವತ್ತ ಹೆಜ್ಜೆ ಇಡಬೇಕಾಗಿದೆ ಎಂದು ಸಾಹಿತಿ ಟಿ.ಎಂ.ಶಿವಶಂಕರಪ್ಪ ಹೇಳಿದರು.

ಹಳೇಬೀಡಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸಾ ಕೋಶ, ಕನ್ನಡ ವಿಭಾಗ ಹಾಗೂ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಂಗ್ಲಿಷ್ ಪ್ರಭಾವದಿಂದ ಕನ್ನಡ ಭಾಷೆಯ ಮೇಲೆ ದಾಳಿಯಾಗುತ್ತಿದೆ. ದೂರದರ್ಶನ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡ ಭಾಷೆಯ ನೈಜತೆ ಇಲ್ಲದಂತಾಗುತ್ತಿದೆ ಎಂದು ತಿಳಿಸಿದರು.



ಕನ್ನಡ ಭಾಷೆ ವೈವಿಧ್ಯಮಯವಾಗಿದೆ. ಹಲವು ರಾಜ ಮನೆತನಗಳು ಕನ್ನಡ ಭಾಷೆಯನ್ನು ಬೆಳೆಸಿವೆ. ಪ್ರಾಚೀನ ಕವಿಗಳಿಗೆ ಕನ್ನಡ ನಾಡಿನ ಕವಿಗಳು ಆಶ್ರಯ ನೀಡಿದ್ದರಿಂದ ಇಂದಿನ ಅಧ್ಯಯನಕ್ಕೆ ಸಾಕಷ್ಟು ಮಹಾಕಾವ್ಯಗಳು ದೊರಕಿವೆ. ಹೊಯ್ಸಳರ ನಾಡು ಹಳೇಬೀಡು ರಾಘವಾಂಕ, ಜನ್ನ ಕವಿ ಮೊದಲಾದವರು ಕಾವ್ಯ ರಚನೆ ಮಾಡಿದ ಪುಣ್ಯ ಭೂಮಿಯಾಗಿದೆ. ಅವರು ಮೆಟ್ಟಿದ ನೆಲದ ಮೇಲೆ ಓಡಾಡುತ್ತಿರುವ ಇಲ್ಲಿಯ ವಿದ್ಯಾರ್ಥಿಗಳು ಪುಣ್ಯಶಾಲಿಗಳು ಎಂದು ಹೇಳಿದರು.

ಪ್ರಾಚಾರ್ಯ ಡಾ.ಶ್ರೀನಿವಾಸ ಮಾತನಾಡಿ, ಕನ್ನಡಕ್ಕಾಗಿ ಹೊಸದಾಗಿ ಏನನ್ನು ಮಾಡಬೇಕಾಗಿಲ್ಲ, ಪ್ರಾಚೀನರು ಬೆಳೆಸಿರುವ ಕನ್ನಡವನ್ನು ನಾವು ಅಭಿಮಾನದಿಂದ ಉಳಿಸಿಕೊಳ್ಳಬೇಕಾಗಿದೆ. ಕನ್ನಡ ಮರೆಯುವಷ್ಟು ಅನ್ಯ ಭಾಷೆಯ ಪ್ರಭಾವಕ್ಕೆ ಒಳಗಾಗಬಾರದು. ಪರಭಾಷೆಯನ್ನು ಗೌರವಿಸುತ್ತಾ, ಕನ್ನಡ ಭಾಷೆಯನ್ನು ಬೆಳೆಸಬೇಕು ಎಂದು ತಿಳಿಸಿದರು.

ಪತ್ರಕರ್ತ ಎಚ್‌ಎಸ್.ಅನಿಲ್ ಕುಮಾರ್ ಮಾತನಾಡಿ, ಭಾಷೆ ವಿಭಿನ್ನವಾಗಿದ್ದರೂ ಗ್ರಾಮೀಣ ಪ್ರದೇಶದ ಜನರು ಕನ್ನಡವನ್ನು ಉಳಿಸಿ ಬೆಳೆಸಿದ್ದಾರೆ. ಜನಪದದಲ್ಲಿ ಕೇಳಿ ಬಂದ ಮಾಹಿತಿಗಳಿಂದ ಇತಿಹಾಸದ ಹೆಚ್ಚಿನ ಅಧ್ಯಯನಕ್ಕೆ ಸಹಕಾರಿಯಾಗಿದೆ. ಹಳ್ಳಿಗರು ಕಲೆ, ಇತಿಹಾಸ, ಸಂಸ್ಕೃತಿಯನ್ನು ಉಳಿಸಿದ್ದಾರೆ ಎಂದು ಅವರು ಹೇಳಿದರು.

ಕನ್ನಡ ವಿಭಾಗ ಮುಖ್ಯಸ್ಥ ಬಿ.ಇ. ಶಿವರಾಜಕುಮಾರ, ಐಕ್ಯೂಎಸಿ ಸಂಚಾಲಕ ಡಾ.ಅಭಿಷೇಕ್ ಎನ್., ಆಯ್ಕೆ ಶ್ರೇಣಿ ಗ್ರಂಥಪಾಲಕ ಮನೋಜ್ ಕುಮಾರ್ ಕೆ.ಎಸ್.ಕಚೇರಿ ಅಧೀಕ್ಷಕ ದಿವಾಕರ, ಪ್ರಾಧ್ಯಾಪಕರಾದ ದಶರಥ ಕೆ.ಟಿ, ಚಂದ್ರಶೇಖರಸಿಂಗ್, ಶಂಕರಪ್ಪ, ಡಿಂಪಲ್, ತಿಮ್ಮನಾಯಕ ಇತರರಿದ್ದರು.

## ವನ್ಯ ಚೈತನ್ಯ: ಟ್ರೋಫಿ, ಬಹುಮಾನ ವಿತರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಮಲ್ನಾಡ್ ಈಕೋ ಕ್ಲಬ್ ವತಿಯಿಂದ ಎರಡು ದಿನಗಳ ಕಾಲ ಅಯೋಜೀಸಿದ್ದ ವನ್ಯ ಚೈತನ್ಯ 2025 ಕಾರ್ಯಕ್ರಮದಲ್ಲಿ ಸ್ಪರ್ಧೆಯಲ್ಲಿ ವಿಜೇತರಾದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಟ್ರೋಫಿ ಹಾಗೂ ಬಹುಮಾನ ವೀತರಿಸಲಾಯಿತು.

ಶಿಕ್ಷಣ ಸಂಸ್ಥೆಯ ಪ್ರದಾನ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ವಿದ್ಯಾರ್ಥಿಗಳಿಗೆಬಹುಮಾನ ವಿತರಣೆ ಮಾಡಿ ಮಾತಾನಾಡಿ, ಪರಿಸರೋತ್ಸವಾದ ವನ್ಯ ಚೈತನ್ಯ ವಿದ್ಯಾರ್ಥಿಗಳಿಗೆ ಪರಿಸರದ ನಿಸರ್ಗದತ್ತ ಗಮನ ಸೆಳೆದಿದೆ, ಪರಿಸರ ಬದ್ದತೆಯ ಅರಿವು ಮೂಡಿಸಿ ಹಸಿರು ಉಳಿಸಿ ಬೆಳೆಸುವ ಗುರಿ ಹೊಂದುವ ಪ್ರೇರಣ ಶಕ್ತಿ ಸಿಕ್ಕಿದೆ, ಚಿತ್ರಕಲೆ, ಪೋಸ್ಟರ್ ವಿನ್ಯಾಸ, ಪ್ರಕೃತಿಯ ಪೋಟೋಗ್ರಫಿ ಸೇರಿದಂತೆ ಹಲವಾರು ಪರಿಸರ ಜಾಗೃತಿಯ ಚಟುವಟಿಕೆಗಳನ್ನು ಮಾಡಿ ತೋರಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು.



ಕಾಲೇಜು ಇನ್ ಚಾರ್ಜ್ ಪ್ರಾಂಶುಪಾಲ ಡಾ.ಹೆಚ್. ಎಸ್. ನರಸಿಂಹನ್, ನಿವೃತ್ತ ಪ್ರಾಂಶುಪಾಲರಾದ ಡಾ. ಎ. ಜೆ. ಕೃಷ್ಣಯ್ಯ, ವಿದ್ಯಾರ್ಥಿ ಕ್ಷೇಮಾಭಿವೃದ್ದಿ ಸಹ ಅಧಿಕಾರಿ ಡಾ ಶಿವಶಂಕರ, ಕಾರ್ಯಕ್ರಮ ಸಂಯೋಜಕರಾದ ಡಾ. ಡಿ. ವಿ. ಪ್ರಧೀಪ, ಡಿ.ವಿ.ಶೃತಿ, ಪ್ರಾದ್ಯಾಪಕ ರಮೇಶ್, ಮಾಧ್ಯಮ ಸಂಯೋಜಕ ಕಟ್ಟಾಯ ಶಿವಕುಮಾರ್, ಹಾಸನ ವಿವಿಸಿ ನ್ಯೂಸ್ ಚಾನಲ್ ಸಂಪಾದಕ ಸ್ವಾಗತ. ಈಕೋ ಕ್ಲಬ್ ಅಧ್ಯಕ್ಷ ಸೂರ್ಯ ಹಾಜರಿದ್ದರು.

ಶಾಲಾ ಚಾಂಪಿಯನ್ ಶೀಫ್ ಟ್ರೋಫಿ ವಿನ್ನರ್ ಅಗಿ ಹಾಸನ ನೇತಾಜಿ ಪಬ್ಲಿಕ್ ಶಾಲೆ ಪಡೆದುಕೊಂಡರೆ, ಪಸ್ಟ್ ರನ್ನರ್ ಅಗಿ ಡೇಕ್ಕನ್ ವ್ಯಾಲಿ ಇಂಟರ್ ನಾಷನಲ್ ಸ್ಕೂಲ್ ಪಡೆದುಕೊಂಡರೆ, ಪಿಯು ಚಾಂಪಿಯನ್‌ಶಿಪ್‌ಟ್ರೋಫಿ ವಿನ್ನರ್ ಅಗಿ ಸೆಂಟರ್ ಕಾಮರ್ಸ್ ಕಾಲೇಜು ಪಡೆದರೆ ಪಸ್ಟ್ ರನ್ನರ್ ಅಗಿ ಹಾಸನ ವಿಭಜಿತ ಪಿಯು ಕಾಲೇಜು ಪಡೆದುಕೊಂಡಿತು.

## ಬುದ್ಧಿ ವಿಕಲಚೇತನ ಮಕ್ಕಳಿಗೆ ಸಮವಸ್ತ್ರ ವಿತರಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಡಿ.3ರ ವಿಶ್ವ ವಿಕಲಚೇತನ ದಿನಾಚರಣೆ ಅಂಗವಾಗಿ ತಾಲ್ಲೂಕು ಯುವ ಕಾಂಗ್ರೆಸ್ ಸಮಿತಿಯು ತಾಲ್ಲೂಕಿನ ಬರಗೂರು ಹ್ಯಾಂಡ್ ಪೋಸ್ಟ್‌ನಲ್ಲಿರುವ ವಿದ್ಯಾರಣ್ಯ ಸಂಸ್ಥೆಯ ಅವಕಾಶ ಬುದ್ಧಿ ವಿಕಲಚೇತನ ವಸತಿಯುತ ಪಾಠಶಾಲೆಯ ಮಕ್ಕಳಿಗೆ ಸಮವಸ್ತ್ರ ವಿತರಣೆ ಮಾಡಲಾಯಿತು.

ಅವಕಾಶ ಬುದ್ಧಿ ವಿಕಲಚೇತನ ವಸತಿಯುತ ಪಾಠಶಾಲೆಯಲ್ಲಿರುವ 40 ಮಕ್ಕಳಿಗೆ ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎ.ಜೆ.ವೇಣು ಗೋಪಾಲ್ ಮತ್ತು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರುವನಹಳ್ಳಿ ನೇತೃತ್ವದಲ್ಲಿ ಯುವ ಕಾಂಗ್ರೆಸ್ಸಿಗರು ಮಕ್ಕಳಿಗೆ ಕೇಕ್ ತಿನ್ನಿಸಿ, ಟ್ರ್ಯಾಕ್ ಸೂಟ್ ಸಮವಸ್ತ್ರಗಳನ್ನು ವಿತರಣೆ ಮಾಡಿದರು.



ಯುವ ಕಾಂಗ್ರೆಸ್ ಅಧ್ಯಕ್ಷ ಎ.ಜೆ. ವೇಣುಕುಮಾರ್ ಅವರು ಮಾತನಾಡಿ, ವಿಕಲಚೇತನರು ದೇವರ ಮಕ್ಕಳಿದಂತೆ, ಅವರ ಬಗೆ ಎಲ್ಲರೂ ಸಾಮಾಜಿಕ ಕಳಕಳಿ ಹೊಂದಬೇಕು, ಅವರಿಗೆ ಸಮಾನತೆ, ಸಾಮಾಜಿಕ ದೃಡತೆ, ಮಾನಸಿಕ ಧೈರ್ಯ ತುಂಬುವ ಕೆಲಸ ಎಲ್ಲರಿಂದಾಗಬೇಕು. ಸಮಾಜದಲ್ಲಿ ಅವರಿಗೆ ಇರುವಂತಹ ಸೌಲಭ್ಯಗಳು ದೊರೆಯುವಂತಾಗಬೇಕು ಎಂದು ಹೇಳಿದರು.

ವಿಶ್ವ ವಿಕಲಚೇತನರ ದಿನಾಚರಣೆ ಸಲುವಾಗಿ ಡಿ.2 ರಂದು ಜಿಲ್ಲಾಹಂತದ ವಿಕಲಚೇತನರ ಕ್ರೀಡಾಕೂಟ ನಡೆಯುತ್ತಿದ್ದು, ಹಿನ್ನಲೆಯಲ್ಲಿ ಇಲ್ಲಿನ 40 ಮಕ್ಕಳಿಗೆ ಟ್ರ್ಯಾಕ್ ಸೂಟ್ ವಿತರಣೆ ಮಾಡಲಾಗಿದೆ. ಎಲ್ಲ ಮಕ್ಕಳು ಕ್ರೀಡಾ ಕೂಟದಲ್ಲಿ ಭಾಗವಹಿಸಿ ಪ್ರಶಸ್ತಿ ತರುವಂತಾಗಬೇಕು. ಇಲ್ಲಿನ ಮಕ್ಕಳಿಗೆ ಅವಶ್ಯಕ ವಸ್ತುಗಳ ಅಗತ್ಯತೆ ತಿಳಿಸಿದರೆ ಯುವ ಕಾಂಗ್ರೆಸ್ ನೆರವು ನೀಡಲು ಸಿದ್ಧವಿದ್ದು, ವಿಕಲಚೇತನರನ್ನು ನಮ್ಮೊಳಗಿನಲ್ಲಿ ಒಬ್ಬರನ್ನಾಗಿ ಕಾಣುವುದು ನಮ್ಮೆಲ್ಲರ ಆದ್ಯತೆ ಯಾಗಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರುವನಹಳ್ಳಿ, ಚನ್ನರಾಯಪಟ್ಟಣ ಬ್ಲಾಕ್ ಉಪಾಧ್ಯಕ್ಷ ಸಚ್ಚಿನ್, ಹಿರಿಸಾವೆ ಬ್ಲಾಕ್ ಕಾಂಗ್ರೆಸ್ ಮುಖಂಡ ನವೀನ್ ಬಾಬು, ನವೀನ್ ವಳಗೇರಹಳ್ಳಿ, ಜೀವನ್, ವೇಣು, ಮಂಜುನಾಥ್, ಸಂತೋಷ್, ಉದ್ಯಮಿ ಅನಿಲ್ ಕುಮಾರ್ ಇನ್ನಿತರರು ಇದ್ದರು.

## ಜಿಲ್ಲೆಗೆ ಮುಖ್ಯಮಂತ್ರಿ: ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ಮನವಿ

• ಪ್ರಜೋದಯ ವರದಿ

**ಬೇಲೂರು:** ಮುಖ್ಯಮಂತ್ರಿಗಳು ಜಿಲ್ಲೆಗೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ತಾಲೂಕಿನ ಹೆಚ್ಚಿನ ಮಹಿಳೆಯರು ಈ ಕಾರ್ಯಕ್ರಮಕ್ಕೆ ಆಗಮಿಸುವಂತೆ ಕೆಡಿಪಿ ಸದಸ್ಯೆ ಸೌಮ್ಯಾ ಆನಂದ್ ಮನವಿ ಮಾಡಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಸನಕ್ಕೆ ಡಿ.6 ರಂದು ಹಲವಾರು ಯೋಜನೆಗಳಿಗೆ ಶಂಕುಸ್ಥಾಪನೆ ಹಾಗು ಸವಲತ್ತುಗಳ ವಿತರಣೆಗೆ ಆಗಮಿಸುವ ಹಿನ್ನಲೆ ತಾಲೂಕಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದ ಅವರು, ನಾಲ್ಕು ಬಾರಿ ಶಾಸಕರಾಗಿ ಒಂದು ಬಾರಿ ಮಂತ್ರಿಯಾಗಿರುವ ಬಿ. ಶಿವರಾಂ ಅವರ ವಿರುದ್ಧ ಅಪಪ್ರಚಾರ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಅಲ್ಲದೆ ನಿರುದ್ಯೋಗಿಗಳ ಅಧ್ಯಕ್ಷ ಎಂದೇಳಿರುವ ತಾಲ್ಲೂಕು ಅಧ್ಯಕ್ಷರು ಕೂಡಲೇ ಕ್ಷಮಾಪಣೆ ಕೇಳಬೇಕು ಎಂದು ಒತ್ತಾಯಿಸಿದರು.



ಕಳಪೆ ಕಾಮಗಾರಿ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಶಾಸಕರ ಹೊಣೆಯೂ ಇದರಲ್ಲಿ ಇರುತ್ತದೆ ಎಂಬುದನ್ನು ಅರಿತು ಮಾತನಾಡಬೇಕು. ಬಿಕ್ಕೋಡು ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಸರ್ಕಾರದ ಯೋಜನೆಯಾಗಿದ್ದು, ಶಾಸಕರು ಸರ್ಕಾರದ ಒಂದು ಭಾಗವಾಗಿದ್ದಾರೆ ಅದನ್ನು ಅರಿತಿರಬೇಕು. ಇನ್ನು ಕೆಡಿಪಿ ಸದಸ್ಯರು ಶಾಸಕರ ವಿಷಯದಲ್ಲಿ ಈ ರೀತಿ ಮಾತಾಡಿರುವುದು ತಪ್ಪು ಎಂದು ಹೇಳಿದರು.

ಸಂಸದರು ಈ ಭಾಗದಲ್ಲಿ ಯಾವುದೇ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿಲ್ಲ ಎಂದು ಹೇಳುವ ಅವರಿಗೆ ಯಾವ ನೈತಿಕತೆ ಇದೆ. ಈಗಾಗಲೇ ಆನೆ ಕಾರಿಡಾರ್ ಯೋಜನೆ ಹಾಗೂ ಬ್ಯಾರಿಕೇಡ್ ನಿರ್ಮಾಣ ಮಾಡಲು ಈಗಾಗಲೇ ಸಂಸತ್‌ನಲ್ಲಿ ಹಲವಾರು ಬಾರಿ ಚರ್ಚೆ ಮಾಡಿ ಪರಿಹಾರಕ್ಕೆ ಈಗೀಗ ಮುಂದಾಗಿದ್ದು ಆನೆಗಳ ದಾಳಿಗೆ ಪ್ರತಿ ಸಾವು ನೋವಾದ ಸಂದರ್ಭದಲ್ಲಿ ಸ್ಥಳಕ್ಕೆ ಬಂದು ಅವರ ಸಂಕಷ್ಟಕ್ಕೆ ಸ್ಪಂದಿಸಿದ್ದಾರೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆಯ ಸದಸ್ಯೆ ವಿಶಾಲಾಕ್ಷಿ ಅವರು ಮಾತನಾಡಿ, ಶಕ್ತಿ ಯೋಜನೆಯಿಂದ ಒಂದು ಸಾವಿರ ಕೋಟಿಗೂ ಹೆಚ್ಚು, ಯುವ ನಿಧಿ ಯೋಜನೆಯಲ್ಲಿ 20 ಸಾವಿರ ಹಾಗೂ ಗೃಹಲಕ್ಷ್ಮೀ ಯೋಜನೆಯಲ್ಲಿ 1 ಕೋಟಿಗೂ ಅಧಿಕ ಮತ್ತು ಗೃಹ ಜ್ಯೋತಿಯಲ್ಲಿ 1 ಕೋಟಿ ಹಾಗೂ ಅನ್ನಭಾಗ್ಯ ಯೋಜನೆಯಲ್ಲಿ 1 ಲಕ್ಷದ 75 ಸಾವಿರಕ್ಕೂ ಹೆಚ್ಚು ಜನರು ಇದರ ಸದುಪಯೋಗ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಮೀಳ ಮಾದಿಹಳ್ಳಿ ಹೊಬಳಿ ಅದ್ಯಕ್ಷೆ,ಕೆಡಿಪಿ ಸದಸ್ಯೆ ಜ್ಯೋತಿ, ಭಾಗ್ಯಮ್ಮ ಹಾಜರಿದ್ದರು.

### ಶ್ರೀ ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ಧಿ ಸಂಘದಿಂದ ಹೋಮ, ಅನ್ನ ಸಂತರ್ಪಣೆ

## ಅಂಜನೇಯಸ್ವಾಮಿ ಸನ್ನಿಧಿಯಲ್ಲಿ ಅದ್ಧೂರಿ ಹನುಮ ಜಯಂತಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದಲ್ಲಿನ 40 ಅಡಿ ಶ್ರೀರಾಮಭಕ್ತ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀ ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ಧಿ ಸಂಘವು 27ನೇ ವರ್ಷದ ಅದ್ದೂರಿ ಹನುಮ ಜಯಂತಿ ಆಚರಣೆ ಮಾಡುತ್ತಿದ್ದು, ಹಿನ್ನಲೆಯಲ್ಲಿ ಸೋಮವಾರ ಸ್ವಾಮಿಯವರ ಸನ್ನಿಧಿಯಲ್ಲಿ ರಾಮ ತಾರಕ ಹೋಮ ನಡೆಸಿ ಸಾರ್ವಜನಿಕ ಅನ್ನ ಸಂತರ್ಪಣೆ ಕಾರ್ಯ ನಡೆಸಲಾಯಿತು.

ಪಟ್ಟಣದ ಕೇಂದ್ರ ಸ್ಥಾನದಲ್ಲಿರುವ 40 ಅಡಿ ಆಂಜನೇಯ ಎಲ್ಲರ ಪ್ರಮುಖ ಆಕರ್ಷಣೆ, ಈ ದೇವಾಲಯದ ಉಸ್ತುವಾರಿ ಹೊತ್ತಿರುವ ಶ್ರೀ ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ಧಿ ಸಂಘವು ಎರಡು ದಶಕಗಳಿಂದಲೂ ಅದ್ದೂರಿ ಹನುಮ ಜಯಂತಿ ಆಚರಣೆ ಮಾಡುತ್ತಾ ಬಂದಿದ್ದು, ಪ್ರಸಕ್ತ ವರ್ಷ 27ನೇ ವರ್ಷದ ಆಚರಣೆಗೆ ಮುಂದಾಗಿ ಪಟ್ಟಣವನ್ನೆಲ್ಲಾ ವಿದ್ಯುತ್ ದೀಪಾಲಂಕಾರದೊಂದಿಗೆ ಸಿಂಗಾರಿಸಲಾಗಿದೆ. ಹನುಮ ಜಯಂತಿ ಅಂಗವಾಗಿ 3 ದಿನಗಳು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.



ಮೊದಲ ದಿನವಾದ ನವೆಂಬರ್ 30 ರ ಭಾನುವಾರದಂದು ಭಕ್ತಿಯಿಂದ ಭಗವಂತನೆಡೆಗೆ ಕಾರ್ಯಕ್ರಮದಡಿ ಬೆಳಿಗ್ಗೆ 8 ಘಂಟೆಯಿಂದ ರಾತ್ರಿ 8 ಘಂಟೆವರೆಗೆ ನಿರಂತರವಾಗಿ 18 ವಿವಿಧ ತಂಡಗಳಿಂದ ಅಖಂಡ ಭಜನಾ ಕಾರ್ಯಕ್ರಮ ನಡೆಸಲಾಗಿ, ಎರಡನೇ ದಿನವಾದ ಸೋಮವಾರ ದಂದು ಬೆಳಿಗ್ಗೆ ಸ್ವಾಮಿಯವರಿಗೆ ಪಂಚಾಮೃತಾಭೀಷೇಕ ನೆರವೇರಿಸಿ ಬೆಣ್ಣೆ ಆಲಂಕಾರ ಮಾಡಿ, ದೇವಸ್ಥಾನದ ಮುಂಭಾಗ ರಾಮತಾರಕ ಹೋಮ ನಡೆಸಲಾಯಿತು. ಹೋಮದಲ್ಲಿ ಭಾಗಿಯಾಗಿದ್ದ ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಎ.ಎನ್. ಕುಮಾರಸ್ವಾಮಿಯವರ ಪುತ್ರ ಪ್ರತೀಕಾ ಕವಿತಾ ದಂಪತಿಗಳು ಮತ್ತು ಶಾಸಕ ಸಿ.ಎನ್.ಬಾಲಕೃಷ್ಣರವರು ಮಧ್ಯಾಹ್ನ 12 ಘಂಟೆಗೆ ಪೂರ್ಣಾಹುತಿ ನಡೆಸಿದರು. ಮಹಾಮಂಗಳಾರತಿ ನಡೆಸಿ ತರುವಾಯ ಸಾವಿರಾರು ಮಂದಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಪೂಜಾ ವಿಧಿವಿಧಾನಗಳನ್ನು ವೇದ ಬ್ರಹ್ಮ ಮಾದಾಪುರ ರಘುರಾಮ್ ಶರ್ಮ ಅವರು ನೆರವೇರಿಸಿದರು.



ಅಂತಿಮ ದಿನವಾದ ಮಂಗಳವಾರದಂದು ಸ್ವಾಮಿಯವರಿಗೆ ಬೆಳಿಗ್ಗೆ ಪಂಚಾಮೃತಾಭಿಷೇಕ ನೆರವೇರಿಸಿ ರಜತ ಕವಚಧಾರಣೆ, ವಿಶೇಷ ಪುಷ್ಪಲಂಕಾರದೊಂದಿಗೆ ಮಹಾ ಮಂಗಳಾರತಿ ತೀರ್ಥಪ್ರಸಾದ ವಿನಿಯೋಗವಿದ್ದು, ಅಂದು ವಿಶೇಷವಾಗಿ ಶ್ರೀ ರಾಮಭಕ್ತ ಆಂಜನೇಯಸ್ವಾಮಿಯವರ ವೈಭವದ ಉತ್ಸವ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಲಿದೆ. ಉತ್ಸವದಲ್ಲಿ ಮಂಗಳೂರಿನ ಧರ್ಮ ಶಾಸ್ತ್ರ ಚಂಡೆ ಬಳಗ ಕಲಾತಂಡ, ನಾಯಂಡಿ ಈ ಭೂಮಿ ಡೋಲ್ ಸೆಟ್, ಮಂಡ್ಯ ಪೂಜಾ ಕುಣಿತ ಹಾಗೂ ಆಂಜನೇಯಸ್ವಾಮಿ ವೇಷಧಾರಿ ಮತ್ತು ಗೊಂಬೆಗಳ ಮೆರವಣಿಗೆ ಇರಲಿದೆ ಎಂದು ಶ್ರೀ ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷರಾದ ಎ.ಎನ್. ಕುಮಾರಸ್ವಾಮಿ ತಿಳಿಸಿದರು.

ವಿನಾಯಕ ಕಾರು ಚಾಲಕರ ಕ್ಷೇಮಾಭಿವೃದ್ದಿ ಸಂಘದ ಅಧ್ಯಕ್ಷ ಬಿ.ಜೆ.ರಾಜೇಗೌಡ, ಉಪಾಧ್ಯಕ್ಷ ನಾಗರಾಜು, ಕಾರ್ಯದರ್ಶಿ ಸಿ.ಕೆ.ಚಂದ್ರು, ಖಜಾಂಚಿ ಕುಕ್ಕೆಶ್ರೀ ಶಂಕರ್, ಸಹ ಕಾರ್ಯದರ್ಶಿ ಎಂ.ಜಿ. ತಿರುಮಲೇಶ್ ಮತ್ತು ಸಂಘದ ಸದಸ್ಯರು ಹಾಜರಿದ್ದರು.

## ಸಾರ್ವಜನಿಕ ಸಹಾಯವಾಣಿ ಕೇಂದ್ರ ಸ್ಥಾಪನೆ

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆಯಿಂದ ಸಾರ್ವಜನಿಕರಿಗೆ ತ್ವರಿತ ಹಾಗೂ ಉತ್ತಮ ಸೇವೆಯನ್ನು ಒದಗಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಸಾರ್ವಜನಿಕ ಸಹಾಯವಾಣಿ ಕೇಂದ್ರವನ್ನು ಮಹಾನಗರ ಪಾಲಿಕೆಯಲ್ಲಿ ಸ್ಥಾಪಿಸಲಾಗಿದ್ದು, ಬೆಳಿಗ್ಗೆ 5 ರಿಂದ ರಾತ್ರಿ 10 ರವರೆಗೆ ಸಾರ್ವಜನಿಕರು ತಮ್ಮ ಕುಂದು ಕೊರತೆಗಳಾದ ಬೀದಿ ದೀಪ, ನೀರು ಸರಬರಾಜು, ಒಳಚರಂಡಿ, ಸ್ವಚ್ಚತೆ, ಖಾತೆ ಮಾಹಿತಿಗಳನ್ನು ಒಳಗೊಂಡಂತೆ ದೂರುಗಳನ್ನು 08172-260700 ದೂ.ಸಂಖ್ಯೆ, ಮೊಬೈಲ್ ನಂ: 7411110719 ಗೆ ಸಲ್ಲಿಸಬಹುದಾಗಿದೆ ಹಾಗೂ ಬೀದಿ ಬದಿ ಕಸ ಎಸೆಯುವವರ ವಿಡಿಯೋ ಅಥವಾ ಮಾಹಿತಿಯನ್ನು ಸಹ ನೀಡಬಹುದಾಗಿದ್ದು, ಮಾಹಿತಿ ನೀಡುವವರ ವಿವರವನ್ನು ಮಾಹಾನಗರ ಪಾಲಿಕೆಯು ಗೌಪ್ಯತೆಯನ್ನು ಕಾಪಾಡಲಾಗುವುದು ಎಂದು ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದ ನಿಮಿತ್ತ
ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯದಲ್ಲಿ, ಹಾಸನ.
ಅಪೀಲು ಸಂಖ್ಯೆ: 346/2025-26

ಅಪೀಲುದಾರರು : ಶ್ರೀಮತಿ ರತ್ನ ಕೋಂ ಎಸ್.ವೆಂಕಟೇಗೌಡ
ಉದಯಗಿರಿ ಬಡಾವಣೆ, 2ನೇ ಕ್ರಾಸ್, ಎನ್.ಡಿ.ಆರ್.ಕೆ. ಕಾಲೇಜು ಎದುರು, ಹಾಸನ- 573201.

ವಿರುದ್ಧ

ರೆಸ್ಪಾಂಡೆಂಟರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಹಾಸನ
ಹಾಸನ ತಾಲ್ಲೂಕು, ಹಾಸನ ಮತ್ತು ಇತರರು
4ನೇ ಯಶೋಧ ಬಿನ್ ಲೇಟ್ ಹನುಮಂತೇಗೌಡ
ಕೋಂ ಲಕ್ಷ್ಮೀಗೌಡ - ಸ್ವಾಮಿ, ಹೊಸೂರು ಗ್ರಾಮ,
ಕುಪ್ಪಳ್ಳಿ ಅಂಚೆ, ಕಸಬಾ ಹೋಬಳಿ, ಹಾಸನ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅಪೀಲಿನ ಅಪೀಲುದಾರಳು ರೆಸ್ಪಾಂಡೆಂಟರ ವಿರುದ್ಧ ಹಾಸನ ತಾಲ್ಲೂಕು, ಕಸಬಾ ಹೋಬಳಿ, ಬಿ.ಕಾಟೀಹಳ್ಳಿ ಗ್ರಾಮದ ಸರ್ವೆ ನಂ.10/10 ರ ವಿಸ್ತೀರ್ಣ 0.30 ಗುಂಟೆ ಜಮೀನನ್ನು 1ನೇ ರೆಸ್ಪಾಂಡೆಂಟರು ಮಾಡಿರುವ ದುಸ್ತಿ ಆದೇಶವನ್ನು ರದ್ದುಪಡಿಸಿ ಅಪೀಲುದಾರಳು ಹಾಲಿ ಸ್ವಾಧೀನಾನುಭವದಲ್ಲಿರುವ ಸರ್ವೆ ನಂ.10/27 ರ ಜಮೀನನ್ನು ಅಳತೆ ಮಾಡಿ ಅಪೀಲುದಾರರಿಗೆ ಸರಿಯಾದ ದುರಸ್ತಿ ಮಾಡುವಂತೆ ಈ ಅಪೀಲು ತಂದಿದ್ದು, ಈ ಅಪೀಲಿನ 4ನೇ ರೆಸ್ಪಾಂಡೆಂಟರು ನ್ಯಾಯಾಲಯದಲ್ಲಿ ಹೊರಡಿಸಿರುವ ಸಮನ್ಸ್ ಪಡೆದುಕೊಳ್ಳಲು ಅವಾಯ್ಡ್ ಮಾಡುತ್ತಿರುತ್ತಾರೆ. ಆದ್ದರಿಂದ ಈ ಅಪೀಲಿನ 4ನೇ ರೆಸ್ಪಾಂಡೆಂಟರಿಗೆ ನ್ಯಾಯಾಲಯದ ಸಮನ್ಸ್ ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ.

ಆದ್ದರಿಂದ 4ನೇ ರೆಸ್ಪಾಂಡೆಂಟರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅಪೀಲಿನ ಹಿಯರಿಂಗ್ ದಿನಾಂಕ: 8/12/2025 ರಂದು ಮಧ್ಯಾಹ್ನ 3.00 ಗಂಟೆಗೆ ಇರುತ್ತದೆ. ಆ ದಿನ ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದ್ದಲ್ಲಿ ಸದರಿ ಅಪೀಲನ್ನು ನಿಮ್ಮ ಗೈರು ಹಾಜರಿಯಲ್ಲಿ ನಡೆಸಲಾಗುವುದು ಮತ್ತು ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಯ ಪಡಿಸಲಾಗಿದೆ.

2025 ನೇ ವರ್ಷದ ನವೆಂಬರ್ ತಿಂಗಳ 27ನೇ ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಅಪೀಲುದಾರರ ಪರ ವಕೀಲರು
ಎಂ.ಮಹಲಿಂಗೇಗೌಡ, ವಕೀಲರು
ಸ್ಥಳ: ಹಾಸನ,
ದಿನಾಂಕ: 27/11/2025

ಘನ ನ್ಯಾಯಾಲಯದ ಆದೇಶದ ಮೇರೆಗೆ
ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು
ಹಾಗೂ ಪದ ನಿಮಿತ್ತ
ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ, ಹಾಸನ.

## ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಇಲ್ಲ, ಒಗ್ಗಟ್ಟಾಗಿದ್ದೇವೆ

• ಪ್ರಜೋದಯ ವರದಿ

**ಮೈಸೂರು:** ಕಾಂಗ್ರೆಸ್‌ನಲ್ಲಿ ಯಾವುದೇ ಗುಂಪುಗಾರಿಕೆ, ಭಿನ್ನಮತಿಯ ಚಟುವಟಿಕೆ ಇಲ್ಲ. ಎಲ್ಲರೂ ಒಗ್ಗಟ್ಟಾಗಿದ್ದೇವೆಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದರು.

ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಪ್ರಬುದ್ಧತೆಯಿಂದ ನಡೆದುಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಗೊಂದಲಗಳು ಬಗೆಹರಿದಿವೆ ಎಂದರು.

ವಿವಿಧ ಮಠಾಧೀಶರಿಂದ ಒತ್ತಾಯದ ಕುರಿತು ಪ್ರತಿಕ್ರಿಯಿಸಿ, ಪ್ರಜಾಪ್ರಭುತ್ವದಲ್ಲಿ ಅವರ ಅಭಿಪ್ರಾಯ ಹೇಳಲು ಎಲ್ಲರಿಗೂ ಅವಕಾಶ ಇದೆ. ನಮ್ಮಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ. ಪಕ್ಷ ಹಾಗೂ ರಾಜ್ಯದ ಹಿತದೃಷ್ಟಿಯಿಂದ ಸೂಕ್ತ ಸಮಯದಲ್ಲಿ ನಿರ್ಧಾರ ಕೈಗೊಳ್ಳುತ್ತದೆ ಎಂದರು.

ಉಪಹಾರ ಸಭೆಗಳಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯ ಇಲ್ಲ. ಅಲ್ಲಿ ಎಲ್ಲಾ ಚರ್ಚೆಗಳೂ ನಡೆಯುತ್ತವೆ. ಹಾಗೆಂದ ಮಾತ್ರಕ್ಕೆ ಅಸಮಾಧಾನ ಎಂದೇನಿಲ್ಲ ಎಂದರು.

# ಕಾಮಗಾರಿಗೆ ಶಾಸಕರು ಮನೆಯಿಂದ ಅನುದಾನ ತಂದಿಲ್ಲ

## ಸರ್ಕಾರದ ವಿರುದ್ಧ ಸಿಮೆಂಟ್ ಮಂಜು ಆರೋಪಕ್ಕೆ ಮುರುಳಿ ಮೋಹನ್ ತಿರುಗೇಟು

• ಪ್ರಜೋದಯ ವರದಿ

ಸಕಲೇಶಪುರ: ರಾಜ್ಯ ಸರ್ಕಾರ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನ ನೀಡಿದ್ದರೂ, ಅನುದಾನ ನೀಡುತ್ತಿಲ್ಲ ಎನ್ನುವ ಶಾಸಕರ ಹೇಳಿಕೆ ತರವಲ್ಲ ಎಂದು ಗ್ಯಾರಂಟಿ ಅನು ಷ್ಠಾನ ಯೋಜನೆ ತಾಲ್ಲೂಕು ಅಧ್ಯಕ್ಷ ಮುರುಳಿ ಮೋಹನ್ ಅವರು ಹೇಳಿದರು.

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರು ಡಿ.6ರಂದು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಹಕ್ಕುಪತ್ರ ವಿತರಣೆಗೆ ಜಿಲ್ಲೆಗೆ ಆಗಮಿಸುತ್ತಿವ ಹಿನ್ನಲೆ ಪಟ್ಟಣದ ರೈತ ಭವನದಲ್ಲಿ ಹಮ್ಮಿಕೊಂಡಿದ್ದ ಪಕ್ಷದ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಚುನಾಯಿತ ಪ್ರತಿನಿಧಿಗಳು ಸರ್ಕಾರದ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಕ್ಷೇತ್ರದಲ್ಲಿ 100ಕ್ಕೂ ಹೆಚ್ಚು ಭೂಮಿಪೂಜೆ, ಗುದ್ದಲಿಪೂಜೆ ಕಾರ್ಯಕ್ರಮ ಗಳು ನಡೆದಿವೆ. ಶಾಸಕರು ಅನುದಾನವನ್ನು ತಮ್ಮ ಮನೆಗಳಿಂದ ತರುವವರಲ್ಲ, ಸರ್ಕಾರ ನೀಡಿದ ಅನುದಾನದಿಂದಲೇ ಈ ಕಾಮಗಾರಿಗಳು ನಡೆಯುತ್ತಿವೆ ಎಂದು ಹೇಳಿದರು.

ಪಕ್ಷವು ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಬಲಿಷ್ಠವಾಗುತ್ತಿದೆ. ಪಕ್ಷಕ್ಕೆ ಸೇರ್ಪಡೆಯಾಗುವವರ ಪ್ರಮಾಣವೂ ಹೆಚ್ಚುತ್ತಿದೆ. ಈ ಸಂದರ್ಭದಲ್ಲಿ ಪಕ್ಷದ ಮುಖಂಡರು ಬೇರೆ



ಪಕ್ಷಗಳಿಂದ ಬರುವವರನ್ನು ಆತ್ಮೀಯವಾಗಿ ಸ್ವಾಗತಿಸಬೇಕು. ಕಳೆದ ಚುನಾವಣೆಯಲ್ಲಿ ನನ್ನ ವಿರುದ್ಧ ಕಾಂಗ್ರೆಸ್‌ನವರೇ ಕೆಲಸ ಮಾಡಿದ ಕಾರಣ ಸೋಲು ಅನುಭವಿಸುವಂತಾಯಿತು. ಬಳಿಕ ಪಕ್ಷ ಬಲಪಡಿಸಲು ನಿಷ್ಠಾವಂತ ಕಾರ್ಯಕರ್ತರೊಂದಿಗೆ ಸಂಚರಿಸಿ ಪಕ್ಷವನ್ನು ಮತ್ತಷ್ಟು ಬಲಿಷ್ಠಗೊಳಿಸಿದ್ದೇನೆ ಎಂದು ಹೇಳಿದರು.

ಕಳೆದ ವಿಧಾನಸಭಾ ಚುನಾವಣೆ ಸೋಲಿನ ನಂತರವೂ ನಾನು ಕ್ಷೇತ್ರ ತೊರೆಯದೆ, ಕಾರ್ಯಕರ್ತರು ಮತ್ತು ಸಾರ್ವಜನಿಕರ ಕೆಲಸಗಳಿಗೆ ಶ್ರಮವಿಟ್ಟು ಸೇವೆ ಮಾಡುತ್ತಿದ್ದೇನೆ. ನನಗೆ ಬೆಂಬಲ ನೀಡಿದ ಸಾರ್ವಜನಿಕರ ಕೆಲಸಗಳನ್ನು ನಿಷ್ಠೆಯಿಂದ ಮಾಡಿ, ಕ್ಷೇತ್ರಕ್ಕೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ತರಲು ಬದ್ಧವಾಗಿ ಕೆಲಸ ಮಾಡಿದ್ದೇನೆ. ನಾನು ಡಿ.ಕೆ.ಶಿವಕುಮಾರ್ ಅವರ ಗರಡಿಯಲ್ಲಿ ಪಳಗಿದ್ದು, ಪಕ್ಷನಿಷ್ಠೆ ಮತ್ತು ಶಿಸ್ತು ರೂಢಿಸಿಕೊಂಡಿದ್ದೇನೆಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಭರಮುಡಿ ಚಂದ್ರು ಅವರು ಮಾತನಾಡಿ, ಮುರಳಿ ಮೋಹನ್ ಅವರು ಚುನಾವಣೆಯ ನಂತರವೂ ಕ್ಷೇತ್ರ ಬಿಟ್ಟು ಹೋಗದೆ, ಅನುದಾನಗಳನ್ನು ತರಲು ಶ್ರಮಿಸುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ವಿರೋಧ ಪಕ್ಷಕ್ಕಿಂತ ಕಾಂಗ್ರೆಸ್‌ನವರೇ ಪಕ್ಷದ ಅಭ್ಯರ್ಥಿ ಯನ್ನು ಸೋಲಿಸಿದರು. ಈಗ ಅಂತಹ ನಾಯಕರನ್ನು ಬದಿಗಿಟ್ಟು ಪಕ್ಷವನ್ನು ಬಲಪಡಿಸಿದ್ದೇವೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲಕ್ಷ್ಮಣ್ ಅವರು ಮಾತನಾಡಿ, ಕ್ಷೇತ್ರದಲ್ಲಿ ಕಾಂಗ್ರೆಸ್ ದಿನದಿಂದ ದಿನಕ್ಕೆ ಬಲಿಷ್ಠಗೊಳ್ಳುತ್ತಿದೆ. 2028ರಲ್ಲಿ ಈ ಕ್ಷೇತ್ರ ಕಾಂಗ್ರೆಸ್‌ಪಕ್ಷದದಾಗುವುದು ಖಚಿತ. ಮುರಳಿ ಮೋಹನ್ ಅವರು ಗೆಲುವು ಸಾಧಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಭಾಸ್ಕರ್ ಹನುಬಾಳು, ಪುರಸಭೆ ಮಾಜಿ ಅಧ್ಯಕ್ಷ ಸಯ್ಯದ್ ಮುಫೀಜ್, ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕಾಧ್ಯಕ್ಷೆ ಅನ್ನಪೂರ್ಣ, ಮನೆ ಮಹಲ್ ಗ್ರಾಮ ಪಂಚಾಯಿತಿ ಸದಸ್ಯ ಹಸೈನಾರ್, ಕಲ್ಗನೆ ಪ್ರಶಾಂತ್, ಬೈಕೆರೆ ದೇವರಾಜ್ ಹಾಜರಿದ್ದರು.

### ತಾಲ್ಲೂಕಿನಿಂದ 30 ಸಾವಿರ ಜನರು ಭಾಗಿ

ಮುಂದಿನ ದಿನಗಳಲ್ಲಿ ಸುಳ್ಳು ಪ್ರಚಾರ ಮಾಡುವ ಶಾಸಕರ ವಿರುದ್ಧ ಮನೆ ಮನೆಗೆ ತೆರಳಿ ಸರ್ಕಾರದ ಸೌಲಭ್ಯಗಳನ್ನು ಜನರಿಗೆ ಮನವರಿಕೆ ಮಾಡಲಾಗುವುದು.

ಡಿ.6ರಂದು ನಡೆಯುವ ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ತಾಲ್ಲೂಕಿನ 26 ಗ್ರಾಮ ಪಂಚಾಯಿತಿಗಳಿಂದ ಬಡವರ ಮನೆಯ ಹಕ್ಕು ಪತ್ರವನ್ನು ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಭಾಗವಹಿಸ ಬೇಕು ಹಾಗು ತಾಲ್ಲೂಕಿನಿಂದ ಸುಮಾರು 30 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ ಎಂದರು.

## ಸರ್ಕಾರಿ ಶಾಲೆ ಉಳಿಸುವುದು ನಮ್ಮೆಲ್ಲರ ಜವಾಬ್ದಾರಿ

» ಮೊದಲನೇ ಪುಟದಿಂದ

**ಬಾಲ್ಯ ಸ್ಮರಿಸಿದ ಡಾಲಿ**

ನಟ ಡಾಲಿ ಧನಂಜಯ ಅವರು ಹುಟ್ಟೂರು ತಾಯಿ ಮಡಿಲಿನಷ್ಟೇ ಸಮ ಎಂದು ತಮ್ಮ ಬಾಲ್ಯದ ದಿನ ಗಳನ್ನು ಮೆಲುಕು ಹಾಕಿದರು. ಊರೂರಿಗೆ ಹೋಗಿ ನಾಟಕ ಮಾಡುತ್ತಿದ್ದೇವು. ನಗರದ ಶಾರದಾ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದೇನೆ. ಬಸವ ರಾಜೇಂದ್ರ ಶಾಲೆಯ ಮೈದಾನದಲ್ಲಿ ಆಟ ವಾಡಿದ್ದೇನೆ. ಐದನೇ ತರಗತಿಯಲ್ಲಿದ್ದಾಗ ಸಾಕ್ಷರತಾ ಆಂದೋ ಲನ ನಾಟಕ ಮಾಡಿದ್ದೆ. ಮಲ್ಲೇಶ್ವರ, ಸುಬ್ರಹ್ಮಣ್ಯ, ಚಿಕ್ಕತಿರುಪತಿ, ಜೇನುಕಲ್ ಸಿದ್ದೇಶ್ವರ ಜಾತ್ರೆ, ಗಣಪತಿ ಉತ್ಸವ, ಕೆರೆ ಕೋಡಿ ಬಿದ್ದಾಗ ಸಂಭ್ರಮ ಪಡುತ್ತಿದ್ದೆವು. 7 ಮತ್ತು 10ನೇ ತರಗತಿಯಲ್ಲಿ ನಾನು ಜಿಲ್ಲೆಗೆ ಟಾಪರ್ ಆಗಿದ್ದೆ ಎಂದು ವಿದ್ಯಾರ್ಥಿ ಜೀವನ ಸ್ಮರಿಸಿದರು.

ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟಾಗ ಸವಾಲುಗಳನ್ನು ಎದುರಿಸಿ ಬೇಕಾಯಿತು. ಎಲ್ಲವನ್ನೂ ಮೀರಿ ಹೊಸ ಜಗತ್ತಿಗೆ ಹೋದಾಗ ಬಹಳ ಕಷ್ಟವಾಯಿತು. ಪ್ರತಿ ಸಿನಿಮಾ ಸೋತಾಗ ನಾನು ಊರಿಗೆ ಬಂದು ಎರಡ್ಮೂರು ದಿನ ಇರುತ್ತಿದ್ದೆ. ಮತ್ತೆ ಇಲ್ಲಿಂದ ಆತ್ಮವಿಶ್ವಾಸ ಪಡೆದು ವಾಪಾಸ್ ಹೋಗುತ್ತಿದ್ದೆ. ಹುಟ್ಟೂರು ತಾಯಿ ಮಡಿಲು ಇದ್ದಂತೆಯೆ ಎಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಮಾತನಾಡಿ, ಸಹಸ್ರಾರು ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆಯ ಬೆಳವಣಿಗೆಗೆ ಕೈಜೋಡಿಸಬೇಕು. ಚಿಕ್ಕ ಹಳ್ಳಿಯಲ್ಲಿ ಜನಿಸಿದ ಧನಂಜಯ್ ಹಿರಿಯ ಕಲಾವಿದ ದೊಡ್ಡಣ್ಣ ರೀತಿ ಸಿನಿಮಾ ರಂಗದಲ್ಲಿ ಮತ್ತಷ್ಟು ಎತ್ತರಕ್ಕೆ ಬೆಳೆಯಬೇಕೆನ್ನುವ ಆಶಯ ನಮ್ಮೆಲ್ಲರದ್ದಾಗಿದೆ. ಮುಂಬರುವ ದಿನಗಳಲ್ಲಿ ಅರಸೀ ಉತ್ಸವ ಆಯೋಜಿಸಿ ಕಲಾ ಕ್ಷೇತ್ರಕ್ಕೆ ಕೊಡುಗೆ ನೀಡಿದವರನ್ನು ಗೌರವಿಸುವ ಜೊತೆಗೆ ನಾಡು, ನುಡಿ ಹಾಗು ಸಂಸ್ಕೃತಿ ಹಿರಿಮೆಯನ್ನು ಪಸರಿಸಲು ಪ್ರಯತ್ನಿಸುತ್ತೇನೆಂದರು.

ಡಾ||ಶಿವಕುಮಾರ್, ಡಾ||ನಾಗಭೂಷಣ್ ಸೇರಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ಚಲನಚಿತ್ರ ನಿರ್ಮಾಪಕ ಕಾಳೇನಹಳ್ಳಿ ಅಡವಿಸ್ವಾಮಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ರಾಂಪುರ ಶೇಖರಪ್ಪ, ನಿರ್ದೇಶಕ ಹೊಸೂರು ಗಂಗಾಧರ್, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ, ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ, ನೊಳಂಬ ಲಿಂಗಾಯತ ಸಂಘದ ಉಪ ಸಮಿತಿ ಅಧ್ಯಕ್ಷ ಗಂಜಿಗೆರೆ ಚಂದ್ರಶೇಖರ್, ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಕಿರಣ್ ಕುಮಾರ್, ಡಾಲಿ ಧನಂಜಯ್ ಬ್ರಿಗೇಡ್ ಅಧ್ಯಕ್ಷ ಅಂಬರೀಶ್, ಉಪಾಧ್ಯಕ್ಷ ಜಿತೇಂದ್ರ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಕಾಂತರಾಜ್, ಶೇಖರನಾಯ್ಕ್, ಸಹ ಕಾರ್ಯದರ್ಶಿ ಸಿದ್ದರಾಮೇಶ್, ಸಂಘಟನಾ ಕಾರ್ಯದರ್ಶಿ ಸ್ವರೂಪ್ ಕೃಷ್ಣ, ಖಜಾಂಚಿ ರಮೇಶ್, ನಿರ್ದೇಶಕರಾದ ಸ್ವಾಮಿ ಭರತ್, ಸತೀಶ್, ಕಾಟೀಕೆರೆ ಸುನಿಲ್, ವಿನಯ್, ಹೇಮಲಿಂಗೇಗೌಡ, ರೋಹಿತ್, ಜಯಣ್ಣ ಇತರರಿದ್ದರು.


## ಮಾಡಾಳು ಸ್ವರ್ಣ ಗೌರಮ್ಮ ದೇಗುಲದಲ್ಲಿ 11 ಸಹಸ್ರ ದೀಪೋತ್ಸವ

• ಪ್ರಜೋದಯ ವರದಿ

**ಮಾಡಾಳು:** ಅರಸೀಕೆರೆ ತಾಲ್ಲೂಕು ಮಾಡಾಳು ಗ್ರಾಮದ ಶ್ರೀ ಸ್ವರ್ಣ ಗೌರಮ್ಮ ದೇವಾಲಯದಲ್ಲಿ 11 ಸಹಸ್ರ ದಿಪೋತ್ಸವ ಅರ್ಥಪೂರ್ಣ ವಾಗಿ ನೆರವೇರಿತು.

ಹಾರನಹಳ್ಳಿ ಕೋಡಿಮಠದ ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಶಿವಬಸವ ಆಶ್ರಮ ರಸ್ತೆಬದಿಯಲ್ಲಿರುವ ದೇವಾಲಯ ದಲ್ಲಿ ಲೋಕ ಕಲ್ಯಾಣಾರ್ಥವಾಗಿ 2ನೇ ವರ್ಷದ ದೀಪೋತ್ಸವ ನೆರವೇರಿತು. ಸ್ವಾಮೀಜಿ ಹಣತೆ ಬೆಳಗಿಸುತ್ತಿದ್ದಂತೆ ನೂರಾರು ಮಹಿಳೆಯರು, ಯುವಕ-ಯುವತಿಯರು ಸಂಭ್ರಮದಿಂದ ಸರತಿ ಸಾಲಿನಲ್ಲಿ ಜೋಡಿಸಿಟ್ಟಿದ್ದ ಹಣತೆಗಳನ್ನು ಹಚ್ಚಿ ಭಕ್ತಿ ಮೆರೆದರು.

ಕಡೆ ಕಾರ್ತಿಕ ಪೂಜೆಯ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ಬಾಳೆ ಕಂದುಗಳಿಂದ ಸಿಂಗರಿಸಲಾಗಿತ್ತು. ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ದೇವಾಲಯವನ್ನು ಅಲಂಕರಿಸಲಾಗಿತ್ತು. ಮುಂಜಾನೆ ಬ್ರಾಹ್ಮಿ ಮುಹೂರ್ತದಲ್ಲಿ ಮಹಾತಪಸ್ವಿ ಶ್ರೀ ಶಿವಲಿಂಗ ಅಜ್ಜಯ್ಯ ಮೂರ್ತಿಗೆ ಹಾಗು ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿ ಅವರ



ಸಮ್ಮುಖದಲ್ಲಿ ಪುರೋಹಿತರಿಂದ ಹವನ, ಹೋಮ, ಧಾರ್ಮಿಕ ಪೂಜಾ ಕಾರ್ಯ ಕ್ರಮಗಳು ಶ್ರದ್ಧಾ ಭಕ್ತಿಯಿಂದ ನೆರವೇರಿದವು. ಭಾನುವಾರ ರಾತ್ರಿ 8.30ಕ್ಕೆ ಶ್ರೀಗಳ ಪಾದ ಪೂಜೆಯೊಂದಿಗೆ ಅಮ್ಮನವರಿಗೆ ಕರ್ಪೂರದಾರತಿ ಸಲ್ಲಿಸಲಾಯಿತು. ಭಕ್ತಾಧಿಗಳಿಗೆ ಕೋಡಿ ಮಠದಿಂದ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿತ್ತು. ರಾಂಪುರ ಶ್ರೀ ನಿರ್ವಾಣ ಸಿದ್ದೇಶ್ವರ ಭಜನಾ ಮಂಡಳಿ ತಂಡದವರಿಂದ ಭಜನೆ ನಡೆಯಿತು.

ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಮಾತನಾಡಿ, ಜಗದ ಕತ್ತಲೆ ಕಳೆ ಯಲು ಸೂರ್ಯ, ಚಂದ್ರ ಹಾಗು ದೀಪ ಬೇಕು. ಅದೇ ರೀತಿ ಮನುಷ್ಯನ ಮನದಲ್ಲಿರುವ ಅಜ್ಞಾನ ಮತ್ತು ಅಂಧಕಾರವನ್ನು ಓಡಿಸಲು ಗುರುಗಳ ಕಾರುಣ್ಯ ಅಗತ್ಯವೆಂದರು.

### ಯುವಜನತೆಗೆ ನ್ಯಾಯಮೂರ್ತಿ ನಾಗಮೋಹನದಾಸ್ ಕರೆ

# ಸಂವಿಧಾನ ಅರ್ಥೈಸಿಕೊಂಡು ಹಕ್ಕುಗಳನ್ನು ತಿಳಿಸಿಕೊಡಿ

• ಪ್ರಜೋದಯ ವರದಿ

**ಹಾಸನ:** ಯುವ ಸಮುದಾಯ ಸಂವಿ ಧಾನವನ್ನು ಓದಿ ಅರ್ಥೈಸಿಕೊಂಡು ನಂತರ ಅದರಲ್ಲಿರುವ ಹಕ್ಕುಗಳ ಬಗ್ಗೆ ಸಮಾಜದಲ್ಲಿರುವ ಪ್ರತಿಯೊಬ್ಬರಿಗೆ ತಿಳಿಸಿಕೊಡುವ ಕೆಲಸ ಮಾಡಬೇಕೆಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್ ಅವರು ಹೇಳಿದರು.

ನಗರದ ಆರ್.ಸಿ.ರಸ್ತೆಯ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಸಂವಿಧಾನ ಓದು ಅಭಿಯಾನದ-ಕರ್ನಾಟಕ ಸಂಸ್ಥೆಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಕುರಿತ ಪ್ರಥಮ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಜಾರಿಯಾಗಿ 75 ವರ್ಷ ಕಳೆದರೂ, ಅದರ ಆಶಯಗಳಂತೆ ಸಂಪೂರ್ಣ ಸಾಧನೆ ಮಾಡಲು ಇನ್ನೂ ಸಾಧ್ಯವಾಗಿಲ್ಲ. ಸರ್ಕಾರಗಳು ಸಂವಿಧಾನದ ಬಗ್ಗೆ



ಅರಿವು ಮೂಡಿ ಸುವ ಕೆಲಸವನ್ನು ಮತ್ತಷ್ಟು ಪರಿ ಣಾಮಕಾರಿಯಾಗಿ ಮಾಡಬೇಕೆಂದು ಹೇಳಿದರು.

ಭಾರತದ ಸಂವಿಧಾನ ಈ ದೇಶದ ನಾಗರಿಕರ ರಕ್ಷಾ ಕವಚವಾಗಿದ್ದು, ಪ್ರತಿಯೊಬ್ಬರಿಗೂ ಸಂವಿಧಾನವೇ ಶ್ರೇಷ್ಠ ಗ್ರಂಥವಾಗಬೇಕು. ಸಂವಿಧಾನ ಅರ್ಥ ಮಾಡಿಕೊಳ್ಳುವ ಹಾಗೆ ಜನ ಸಾಮಾನ್ಯರಿಗೆ ಸರಳೀಕೃತವಾಗಿ ಇದರ ಬಗ್ಗೆ ತಿಳಿಸಿಕೊಡುವ ಕೆಲಸ ಆಗ ಬೇಕಿದೆ. ಗಂಡು-ಹೆಣ್ಣು ಎಂಬ ಲಿಂಗ ಭೇದವಿಲ್ಲದೆ ಎಲ್ಲರೂ ಸಮಾನರು ಎಂಬುದನ್ನು ಸಂವಿಧಾನ ಸಾರಿದೆ. ಪ್ರತಿಯೊಂದು ಹಕ್ಕುಗಳ ಬಗ್ಗೆ ತಿಳಿದು ಕೊಳ್ಳಬೇಕಾದ ಅವಶ್ಯಕತೆ ಯುವಕರಿಗೆ ಇದೆ ಎಂದರು.

ಹಾಸನ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ.ಟಿ.ಸಿ.ತಾರಾನಾಥ್ ಅವರು ಮಾತನಾಡಿ, ಪ್ರತಿಯೊಬ್ಬರೂ ಸಂವಿಧಾನ ಅರ್ಥ ಮಾಡಿಕೊಳ್ಳಬೇಕು. ಅಂಬೇಡ್ಕರ್ ಸಮಾನತೆಯ ಸಂದೇಶ ವನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ಹೇಳಿದ್ದಾರೆ. ನಮ್ಮ ಯುವ ಸಮುದಾಯ ಈ ಮಹಾನ್ ವ್ಯಕ್ತಿಗಳ ಸಮಾನತೆಯ ಸಂದೇಶವನ್ನು ಜೀವನದಲ್ಲಿ ಪಾಲನೆ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ಸಂವಿಧಾನಕ್ಕೆ ಗೌರವ ನೀಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಎಲ್ಲರೂ ಸಂವಿಧಾನ ಓದಿ ಅರ್ಥೈಸಿಕೊಳ್ಳಬೇಕು. ಆ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಯುವಕರು ಪಾಲ್ಗೊಳ್ಳ ಬೇಕೆಂದರು. ಸಂವಿಧಾನ ಓದು ಅಭಿಯಾನದ-ಕರ್ನಾಟಕ ಸಂಸ್ಥೆಯ ಸಂಚಾಲಕ ಬಿ.ರಾಜಶೇಖರ ಮೂರ್ತಿ, ಆಯೋಜಕರಾದರಾಜು ಗೊರೂರು, ರಾಜಶೇಖರ್, ಮಹಿಳಾ ಕಾಲೇಜಿನ ಅಧ್ಯಾಪಕರಾದ ಜಿ.ಆರ್. ಮೋಹನ್ ಕುಮಾರ್, ನಂದನ್ ಪಿ ಇದ್ದರು.

### ಸ್ಪರ್ಧೆಯಲ್ಲಿ 2,310 ವಿದ್ಯಾರ್ಥಿಗಳು ಭಾಗಿ

ಸಂವಿಧಾನ ಕುರಿತು ಪ್ರಥಮ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ 2310 ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿ ಸಿದ್ದರು.

ಗಂಧದಕೋಠಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಭುವನಬಿ.ಪಿ. (ಪ್ರಥಮ), ಹಾಸನ ವೈದ್ಯಕೀಯ ಕಾಲೇಜು ವಿದ್ಯಾರ್ಥಿನಿ ರೋಹಿಣಿ ಮಹೇಂದ್ರ (ದ್ವಿತೀಯ), ಸಂತ ಜೋಸೆಫ್ ಕಾಲೇಜಿನ ವಿದ್ಯಾರ್ಥಿನಿ ಟಿ.ವರ್ಷ ಹಾಗು ಗಂಧದ ಕೋಠಿ ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಕೃಪಾಗೆ ತೃತೀಯ ಬಹುಮಾನ ನೀಡಲಾಯಿತು. ಸಮಾಧಾನಕರ ಬಹುಮಾನ ವನ್ನು ಕಲಾ ಕಾಲೇಜಿನ ವಿನಯ್, ಆರ್.ಸಿ.ರಸ್ತೆ ಗಂಧದಕೋಠಿ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳಾದ ದೀಪ್ತಿ, ದರ್ಶಿನಿ, ಚಂದನ, ಚನ್ನರಾಯಪಟ್ಟಣ ಸ.ಪ್ರ.ದ ಕಾಲೇಜಿನ ಚಂದನ, ಪ್ರಿಯಾಂಕ, ಮಲ್ನಾಡ್ ಕಾಲೇಜಿನ ಸಂತೋಷ್, ಕೊಣನೂರು ಪ.ಕಾಲೇಜಿನ ಅಭಿಷೇಕ್ ಹಾಗು ಜಾವಗಲ್ ಪದವಿ ಕಾಲೇಜಿನ ಉಷಾ ಸೇರಿ ಎಲ್ಲರಿಗೂ ನಗದು ಬಹುಮಾನ ವಿತರಣೆ ಮಾಡಲಾಯಿತು.

## ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ



• ಪ್ರಜೋದಯ ವರದಿ

**ಹಾಸನ:** ಹಾಸನ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಡಿಯೂರು ಗ್ರಾಮದಲ್ಲಿ ಸೋಮವಾರ ಶಾಸಕ ಹೆಚ್.ಪಿ.ಸ್ವರೂಪ್ ಅವರು ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿದರು.

ಕಳೆದ ಹಲವು ದಿನಗಳ ಗ್ರಾಮಸ್ಥರ ಬೇಡಿಕೆ ಹಿನ್ನಲೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಸುಮಾರು 6 ಲಕ್ಷ ರೂ. ವೆಚ್ಚದಲ್ಲಿ ಸ್ಥಾಪಿಸಿ, ಸೋಮವಾರ ಪೂಜೆ ಸಲ್ಲಿಸುವ ಮೂಲಕ ಗ್ರಾಮ ಸ್ಥರು ಹಾಗು ಜೆಡಿಎಸ್ ಕಾರ್ಯಕರ್ತರ ಸಮ್ಮುಖದಲ್ಲಿ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಲಾಯಿತು.

ಅದಕ್ಕೂ ಮೊದಲು ಗ್ರಾಮದ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದೆ ಗ್ರಾಮಕ್ಕೆ ಬರುತ್ತಿದ್ದಂತೆ ಗ್ರಾಮಸ್ಥರು ಅದ್ದೂರಿಯಾಗಿ ಪಟಾಕಿ ಸಿಡಿಸಿ ಸಂಭ್ರಮದಿಂದ ಬರ ಮಾಡಿಕೊಂಡರು.

# ಶ್ರೀ ಕ್ಷೇತ್ರ ಧರ್ಮಸ್ಥಳದ ಕಳಂಕ ಮಾಯ

• ಪ್ರಜೋದಯ ವರದಿ

**ಆಲೂರು:** ಧರ್ಮಸ್ಥಳ ಮಂಜುನಾಥ ಸ್ವಾಮಿ ಮತ್ತು ಅಣ್ಣಪ್ಪಸ್ವಾಮಿ ಶ್ರೇಷ್ಠತನಕ್ಕೆ ಯಾರಿಂ ದಲೂ ಧಕ್ಕೆ ಮಾಡಲು ಸಾಧ್ಯವಿಲ್ಲ. ಶ್ರೀ ಕ್ಷೇತ್ರಕ್ಕೆ ಹಿಡಿದಿದ್ದ ಕಂಟಕ ಬಿಡುಗಡೆಯಾಗಿರುವುದು ಸಂತಸ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪಟ್ಟಣದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದ್ದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿ, ಸರ್ಕಾರ ಮಾಡದ ಕೆಲಸವನ್ನು ಧರ್ಮಸ್ಥಳ ಕ್ಷೇತ್ರ ಮಾಡುತ್ತಿದೆ. ಅದನ್ನು ಸಹಿಸದ ವಿರೋಧಿಗಳು ಕ್ಷೇತ್ರಕ್ಕೆ ಕಳಂಕ ತರುವಲ್ಲಿ ಪ್ರಯತ್ನಿಸಿ ಹತಾಶರಾದರು. ಅಪ ಪ್ರಚಾರಗಳಿಗೆ ಎಂದಿಗೂ ಕಿವಿ ಕೊಡಬಾರದು. ಇತ್ತೀಚೆಗೆ ಪುರುಷರಿಗಿಂತ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಕಾರ್ಯಸಾಧನೆ ಮಾಡುತ್ತಿರುವುದು ಶ್ಲಾಘನೀಯ. ನಾನು ಸಹ ರುಡ್‌ಸೆಡ್ ಯೋಜನೆ ಫಲಾನುಭವಿಯಾಗಿದ್ದು, ಸಿಮೆಂಟ್ ಅಂಗಡಿ ಉದ್ಯಮ ದಿಂದ ಬೆಳೆದು ಇಂದು ಶಾಸಕನಾಗಿದ್ದೇನೆಂದು ಸ್ಮರಿಸಿದರು.



ತಾಲ್ಲೂಕು ಆರೋಗ್ಯಾಧಿಕಾರಿ ಡಾ.ನಿಸಾರ್ ಫಾತಿಮ ಅವರು ವಯಸ್ಕ ಮಹಿಳೆಯರಲ್ಲಿ ಋತುಚಕ್ರ ನಿಂತ ನಂತರ ಕಂಡು ಬರುವ ಆರೋಗ್ಯ ಬದಲಾವಣೆಗಳು ಮತ್ತು ಚಿಕಿತ್ಸೆ ಕುರಿತು ಮಾತನಾಡಿದರು.

ಹಾಸನ ಮಹಿಳಾ ವೈದ್ಯಾಧಿಕಾರಿಗಳ ವಿಭಾಗದ ಅಧ್ಯಕ್ಷೆ ಡಾ.ಮಮತ ಅವರು ಮಾತನಾಡಿ, ಮಹಿಳೆಯರು ಕುಟುಂಬವನ್ನು ಆರೋಗ್ಯಕರವಾಗಿ ಇಟ್ಟುಕೊಳ್ಳುವಲ್ಲಿ ಬೆನ್ನೆಲುಬಾಗಿದ್ದಾರೆ. 9-13 ವರ್ಷ ಪ್ರಾಯದ ಪ್ರತಿ ಹೆಣ್ಣು ಮಕ್ಕಳು ತಪ್ಪದೆ ಗರ್ಭಕೊರಳು ಕ್ಯಾನರ್ ತಡೆಗಟ್ಟುವ ಹೆಚ್.ಪಿ.ವಿ. ಲಸಿಕೆಯನ್ನು ಪಡೆಯಲೆಬೇಕು. ಈ ಲಸಿಕೆಯನ್ನು ಆಲೂರು ರಾಧಮ್ಮ ಜನ ಸ್ಪಂದನ ವೇದಿಕೆಯಿಂದ ಉಚಿತವಾಗಿ ನೀಡುತ್ತಿರುವುದು ಶ್ಲಾಘನೀಯ. ಮಹಿಳೆಯರಿಗೆ ವಯಸ್ಸಾದಂತೆ ಹಾರ್ಮೋನುಗಳಲ್ಲಿ ಬದಲಾಗುವುದರಿಂದ ವೈದ್ಯರನ್ನು ಸಂಪರ್ಕಿಸಿ ಸಲಹೆ ಪಡೆಯಬೇಕು ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಸುರೇಶ್ ಮೊಯಿಲಿ ಅವರು, ಯೋಜನೆ ವತಿಯಿಂದ ಜನಸಾಮಾನ್ಯರಿಗೆ ದೊರಕುವ ಸೌಲಭ್ಯಗಳನ್ನು ವಿವರಿಸಿದರು.

ತಾಲ್ಲೂಕು ಯೋಜನಾಧಿಕಾರಿ ರತ್ನಾಕರ ಕೊಠಾರಿಯವರು ಮಾತನಾಡಿ, ಮಹಿಳೆಯರಿಗೆ ತಾಲ್ಲೂಕಿನಲ್ಲಿರುವ ಸುಮಾರು 25 ಜ್ಞಾನವಿಕಾಸ ಕೇಂದ್ರಗಳ ಮೂಲಕ ಹಣಕಾಸು, ಕುಟುಂಬ, ಮಕ್ಕಳ ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ಬಗ್ಗೆ ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯುವ ಬಗ್ಗೆ ಅರಿವು ಮೂಡಿಸಿ ಜ್ಞಾನ ವೃದ್ಧಿಸಲಾಗುತ್ತಿದೆ. ತಾಲ್ಲೂಕಿನ 115 ಜನಗಳಿಗೆ ಪ್ರತಿ ತಿಂಗಳು 1-1.5 ಸಾವಿರ ಮಾಸಾಶನ, ವಾಸ್ತವ್ಯ ಯೋಜನೆಯಲ್ಲಿ 4 ಅಶಕ್ತ ಕುಟುಂಬಗಳಿಗೆ ಮನೆ ನಿರ್ಮಿಸಿ ಕೊಡಲಾಗಿದೆ ಎಂದರು.

ಪತ್ರಕರ್ತ ಎಂ.ಪಿ.ಹರೀಶ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ದಲ್ಲಿ ಜನಜಾಗೃತಿ ವೇದಿಕೆ ಸದಸ್ಯರಾದ ಎಸ್. ಮೋಹನ ಕುಮಾರ್, ಎಂ. ಬಾಲಕೃಷ್ಣಶೆಟ್ಟಿ, ಎಂ.ಕೆ.ರಾಜ ಶೇಖರ್, ಜ್ಞಾನ ವಿಕಾಸ ಸಮನ್ವಯಾ ಧಿಕಾರಿ ಸರಸ್ವತಿ, ಮೇಲ್ವಿಚಾರಕ ಶ್ರೇಣಿ ಸಿಬ್ಬಂದಿಗಳು, ಸೇವಾ ಪ್ರತಿನಿದಿಗಳು, ಕೇಂದ್ರ ಸದಸ್ಯರು ಹಾಜರಿದ್ದರು. ರಂಗೋಲಿ, ಹೂಗುಚ್ಚ ಮತ್ತು ಕರಕು ಶಲ ಸ್ಪರ್ಧೆ ಏರ್ಪಡಿಸಲಾಗಿತ್ತು. ಹೊಲಿಗೆ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

## ಕಾರೆಕೆರೆ ಕೃಷಿ ಮಹಾವಿದ್ಯಾಲಯದಲ್ಲಿ ರಕ್ತದಾನ ಶಿಬಿರ



**ಹಾಸನ: ನಗರ ಹೊರವಲಯದ ಕಾರೆಕೆರೆ ಕೃಷಿ ಮಹಾವಿದ್ಯಾಲಯದಲ್ಲಿ ಯುವ ರೆಡ್ ಕ್ರಾಸ್, ರೆಡ್ ರಿಬ್ಬನ್ ಮತ್ತು ಎನ್‌ಎಸ್‌ಎಸ್, ಹೆಚ್‌ಡಿಎಫ್‌ಸಿ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಕಾಲೇಜಿನ ಡೀನ್ ಡಾ.ಮುನಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕ್ಲಸ್ಟರ್ ಮುಖ್ಯಸ್ಥ ಆರ್.ಮಧುಸೂದನ್, ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್, ಹೆಚ್‌ಡಿಎಫ್‌ಸಿ ಬ್ಯಾಂಕ್‌ನ ಡಾ.ನಾಗರತ್ನ, ಹೆಚ್.ಆರ್. ಹರ್ಷಿತ್, ಡಾ|| ಶಶಿಕಿರಣ್, ಡಾ|| ಎಸ್.ಜಿ.ಶಶಿಕಲಾ, ಡಾ. ಪ್ರಕಾಶ್ ಕೊರ್ಲೆ, ಡಾ.ಮಂಜುನಾಥ್ ಉಪಸ್ಥಿತರಿದ್ದರು. ಮಹಾವಿದ್ಯಾಲಯದ 70 ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರು.**

## ಜೀಪ್ ಡಿಕ್ಕಿ: ಯುವಕ ಸಾವು

ಪ್ರಜೋದಯ ವರದಿ

**ಬೇಲೂರು:** ಬೈಕ್‌ಗೆ ಎದುರುಗಡೆಯಿಂದ ಬರುತ್ತಿದ್ದ ಮಹೀಂದ್ರಾ ಜೀಪ್ ಡಿಕ್ಕಿ ಯಾಗಿ ಬೈಕ್ ಸವಾರ ಮೃತಪಟ್ಟು ಹಿಂಬದಿ ಕುಳಿತಿದ್ದ ವ್ಯಕ್ತಿ ಗಂಭೀರ ಗಾಯ ಗೊಂಡಿರುವ ಘಟನೆ ತಾಲ್ಲೂಕಿನ ಹಿರಿಹಸಡೆ ಸಮೀಪ ಸೋಮವಾರ ನಡೆದಿದೆ. ಹಿರಿಹಸಡೆ ಗ್ರಾಮದ ಚಂದ್ರಶೇಖರ್ ಎಂಬುವವರ ಪುತ್ರ, ಹಾಸನದ ಕಲಾ ಕಾಲೇಜಿನಲ್ಲಿ ಎಂ.ಎ. ವ್ಯಾಸಂಗ ಮಾಡುತ್ತಿದ್ದ ಹೆಚ್.ಎಸ್.ಚಂದನ್ ಮೃತ ದುರ್ದೈವಿ. ಸ್ನೇಹಿತ ಹೆಚ್.ಪಿ. ಭರತ್ ಗಾಯಾಳು. ಇಬ್ಬರೂ ಕಾರ್ಯ ನಿಮಿತ್ತ ತೊಳಲು ಗ್ರಾಮಕ್ಕೆ ಹೋಗುತ್ತಿದ್ದಾಗ ಎದುರು ಗಡೆಯಿಂದ ವೇಗವಾಗಿ ಬಂದ ಜೀಪ್ ಡಿಕ್ಕಿಯಾಗಿದೆ. ಗಂಭೀರ ಗಾಯಗಳಾಗಿ ಚಂದನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

## ದಲಿತರನ್ನು ಸಿಎಂ ಮಾಡಲು ಒತ್ತಾಯಿಸಿ ಜಿಲ್ಲೆಯಿಂದಲೇ ಹೋರಾಟ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ದಲಿತರನ್ನು ಮುಖ್ಯಮಂತ್ರಿ ಮಾಡಬೇಕೆಂದು ಒತ್ತಾಯಿಸಿ ಜಿಲ್ಲೆ ಯಿಂದಲೇ ಹೋರಾಟ ರೂಪಿಸಲಾಗುವುದೆಂದು ಜಿಲ್ಲಾ ದಲಿತಪರ ಹೋರಾಟಗಾರರ ಒಕ್ಕೂಟದ ಅಧ್ಯಕ್ಷ ದಿನೇಶ್ ಅವರು ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಒಂದು ತಿಂಗಳಿಂದ ರಾಜ್ಯ ರಾಜಕೀಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕಿತ್ತಾಟವನ್ನೇ ನೋಡುತ್ತಿದ್ದೇವೆ. ಸಿದ್ದರಾಮಯ್ಯ ಅವರೇ ಮುಂದುವರಿಯಬೇಕೆಂದು ಕೆಲವರು, ಮತ್ತೆ ಕೆಲವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ನೀಡಬೇಕೆಂದು ಕೆಲವರು ವಾದ ಮಾಡುತ್ತಿದ್ದಾರೆ. ಏಕೆ ಕಾಂಗ್ರೆಸ್ ಪಕ್ಷವನ್ನು ಈ ಇಬ್ಬರಿಗೆ ಮಾತ್ರ ಗುತ್ತಿಗೆ ನೀಡಲಾಗಿದೆಯೇ ಎಂದು ಪ್ರಶ್ನಿಸಿದರು.

ದಲಿತರನ್ನು ಮುಖ್ಯಮಂತ್ರಿ ಮಾಡಿ ಎಂದು ಸಮುದಾಯದ 36 ಶಾಸಕರು ಏಕೆ ಮಾತನಾ ಡುತ್ತಿಲ್ಲ. ಬರೀ ಜೀತಾ ಮಾಡಿಕೊಂಡೇ ಇರ ಬೇಕಾ. ಹಿಂದೆ ಡಾ.ಜಿ.ಪರಮೇಶ್ವರ್ ಅವರು




ಮುಖ್ಯಮಂತ್ರಿ ಆಗುವ ಅವಕಾಶ ತಪ್ಪಿತು. ಈಗ ಮುಖ್ಯ ಮಂತ್ರಿ ಆಗಲು ಪರಮೇಶ್ವರ್, ಮುನಿಯಪ್ಪ, ಡಾ. ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಸತೀಶ್ ಜಾರಕಿಹೊಳಿ ಮೊದಲಾದವರಿದ್ದಾರೆ. ಅವರಿಗೂ ಅವಕಾಶ ಕೊಡಿ ಎಂದು ಒತ್ತಾಯಿಸಿದರು.

ದಲಿತರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕೆಂದು ಆಗ್ರಹಿಸಿ ಹಾಸನದಿಂದಲೇ ಹೋರಾಟ ಆರಂಭಿಸಲಾಗುವುದು. ನಮ್ಮ ಬೇಡಿಕೆ ಈಡೇರಿರುವವರೆಗೂ ನಮ್ಮ ಶಕ್ತಿ ಏನೆಂದು ತೋರಿಸುತ್ತೇವೆ. ಯಾರೂ ಕೂಡ ಲಘುವಾಗಿ ಪರಿಗಣಿಸಬಾರದು. ಡಿ.ಕೆ.ಶಿವಕುಮಾರ್ ಅವರನ್ನೂ ಮುಖ್ಯಮಂತ್ರಿ ಮಾಡಲಿ ಹಾಗೆಯೇ ದಲಿತರನ್ನೂ ಪರಿಗಣಿಸಲಿ. ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದರು.

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರನ್ನಾಗಿ ಮಾಡಿರುವುದು ನಾಮ್ ಕೇ ವಾಸ್ತೆಗೆ ಎಂಬಂತಾಗಿದೆ. ರಾಜ್ಯದಲ್ಲಿ ನಾಯಕತ್ವ ಬದಲಾವಣೆ ವಿಚಾರದಲ್ಲಿ ಖರ್ಗೆ ಅವರು ಅಸಹಾಯಕರಾಗಿದ್ದಾರೆ. ಸಮುದಾಯದ ಬಗ್ಗೆ ಧ್ವನಿ ಎತ್ತುತ್ತಿಲ್ಲ. ಕಾಂಗ್ರೆಸ್‌ನಲ್ಲಿರುವ ದಲಿತ ಮುಖಂಡರು ಧ್ವನಿ ಎತ್ತಿತರೆ ಎಲ್ಲಿ ಪಕ್ಷದಿಂದ ನಮ್ಮನ್ನು ಹೊರ ಹಾಕುತ್ತಾರೆಂಬ ಭಯದಲ್ಲಿದ್ದಾರೆ ಎಂದು ಹೇಳಿದರು.

ಒಕ್ಕೂಟದ ಪದಾಧಿಕಾರಿಗಳಾದ ವಿಠಲ್, ಮಂಜು, ಭಾನುಪ್ರಕಾಶ್, ಮಧು, ಉಮೇಶ್, ಸದಾಶಿವ ಇದ್ದರು.

### 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿ ಬಾಲಕೃಷ್ಣ

# ಬಸ್ ತಂಗುದಾಣ ನಿರ್ಮಾಣಕ್ಕೆ ಭೂಮಿ ಪೂಜೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರಯಾಣಿಕರಿಗೆ ತೊಂದರೆ ಯಾಗದಂತೆ ಇಲ್ಲಿನ ಶ್ರೀಕಂಠಯ್ಯ ವೃತ್ತದಲ್ಲಿ ಪ್ರತ್ಯೇಕ ಎರಡು ಬಸ್ ತಂಗುದಾಣ ನಿರ್ಮಾಣ ಮಾಡಲಾಗುವುದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ಎರಡು ಕಡೆ ತಲಾ 10 ಲಕ್ಷ ರೂ. ವೆಚ್ಚದ ಬಸ್ಸು ತಂಗುದಾಣಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಷ್ಟ್ರೀಯ ಹೆದ್ದಾರಿಯ ಚನ್ನರಾಯಪಟ್ಟಣದ ಕಡೆಗೆ ಹೋಗುವು ಸರ್ವಿಸ್ ರಸ್ತೆಯಲ್ಲಿ ಹಾಗೂ ಶ್ರವಣ ಬೆಳಗೊಳ ರಸ್ತೆಯಲ್ಲಿ ತಲಾ 10 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿ ನಡೆಯಲಿದೆ ಎಂದರು.

ಇಲ್ಲಿನ ಹೊರವಲಯದಲ್ಲಿರುವ ಎನ್.ಗಂಗಾಧರ್ ಕ್ರೀಡಾಂಗಣದ ಅಭಿವೃದ್ಧಿಗೆ 10 ಲಕ್ಷ ರೂ. ಅನುದಾನ ನೀಡಲಾಗಿದೆ. ರೈತ ಸಂಪರ್ಕ ಕೇಂದ್ರ ಕಟ್ಟಡದ ಕಾಮಗಾರಿಯನ್ನು ಸದ್ಯದ ಲ್ಲಿಯೇ ಪ್ರಾರಂಭಿಸಲಾಗುವುದೆಂದು ತಿಳಿಸಿದರು.

ವಿದ್ಯಾರ್ಥಿನಿಯರ ವಸತಿ ನಿಲಯದ ಕಟ್ಟಡ ಕಟ್ಟಲು 4 ಕೋಟಿ ರೂ. ಅನುದಾನ ನೀಡುವಂತೆ



ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ನರೇಗಾ ಯೋಜನೆಯಲ್ಲಿ 6 ಕೋಟಿ ರೂ. ನಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚರಂಡಿಗಳನ್ನು ಹಾಗೂ ರಾಜ್ಯ ಹೆದ್ದಾರಿ 8ರ ಡಿಸಿಸಿ ಬ್ಯಾಂಕ್ ಬಳಿ 1 ಕೋಟಿ ರೂ. ವೆಚ್ಚದಲ್ಲಿ ಸೇತುವೆಯನ್ನು ನಿರ್ಮಿಸಲಾಗಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ 75ರ ಅಂಬೇಡ್ಕರ್ ವೃತ್ತ ಮತ್ತು ಗನ್ನಿ ಬಸವೇಶ್ವರ ವೃತ್ತದ ಬಳಿ ಹೆಚ್ಚು ಅಪಘಾತವಾಗುತ್ತಿವೆ. ಅಂಡರ್ ಪಾಸ್ ನಿರ್ಮಾಣ ಮಾಡುವಂತೆ ಸಾರ್ವಜನಿಕರು ಶಾಸಕರ ಗಮನಕ್ಕೆ ತಂದರು. ಅದಕ್ಕೆ ಉತ್ತರಿಸಿದ ಶಾಸಕರು, ಸಂಬಂಧಪಟ್ಟ ಇಲಾಖೆಯೊಂದಿಗೆ ಸಭೆ ನಡೆಸಿ ಸರ್ಕಾರದ ಗಮನ ಸೆಳೆದು ಸಮಸ್ಯೆ ಬಗೆಹರಿಸಲಾಗುವುದೆಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಪರಮೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಜೆ. ಮಹೇಶ್, ನಿರ್ದೇಶಕ ಹಿಂದ್ಲಟ್ಟಿ ಬೋರೇಗೌಡ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬೋರಣ್ಣ, ಮುಖಂಡರಾದ ರಾಮಕೃಷ್ಣ, ರವಿಕುಮಾರ್, ವೆಂಕಟೇಶ್, ದಲಿತ ಸಂಘಟನೆ ಮಧು, ಬೀಡಾ ಮಂಜುನಾಥ್, ದಿನೇಶ್, ನರಸಿಂಹಮೂರ್ತಿ, ನಾಗೇಶ್, ರೋಡ್ ಮಂಜು ನಾಥ್, ಡಾಬಬಾಬು, ಪುಟ್ಟರಾಜು, ಬಾಲಾಜಿ ಮತ್ತಿತರರು ಇದ್ದರು.

## ಕಾರು ಡಿಕ್ಕಿ: ಬೈಕ್ ಸವಾರ ಸಾವು

**ಸಕಲೇಶಪುರ:** ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಾಳ್ಳು ಪೇಟೆ ಜೆ.ಪಿ. ನಗರದ ಮಂಗಳೂರು ಕ್ಲಿನಿಕ್ ಬಳಿ ಭಾನುವಾರ ನಡೆದಿದೆ.ಜೆ.ಪಿ. ನಗರದ ಪಾಪಣ್ಣ ಮೃತರು. ರಾತ್ರಿ 8.40ರ ಸಮಯದಲ್ಲಿ ರಸ್ತೆ ಬದಿ ನಿಂತಿದ್ದಾಗ ಸಕಲೇಶಪುರ ಕಡೆ ಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಜಾಹಿರಾತಿಗಾಗಿ ಸಂಪರ್ಕಿಸಿ
8747042279

ಮಾರಾಟಕ್ಕಿದೆ
ಇದೇ ಹಾಸನದ NH 75 ರ ಬೈಪಾಸ್ ರಸ್ತೆ, ಬೊಮ್ಮನಾಯಕನಹಳ್ಳಿ ಬಡಾವಣೆಯಲ್ಲಿ 20'0NSx30'0 EW ನಿವೇಶನದಲ್ಲಿ 3 ಅಂತಸ್ತುವುಳ್ಳ 1800 ಚದುರ ಅಡಿ ಹೊಸ ಮನೆ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ:
94481 26779
80883 49615


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK